
# ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ (ರಿ)

## H.S.R. BADAVANE BRAHMANA SANGHA (R)

(SOR/BLU/DR/816/2009-10/31-10-2009)

# 56, 4th Floor, "Gayathri Bhavan", 31st Main, 18th Cross, Sector-II, HSR LAYOUT, BANGALORE-560102

www.hsrvipra.co.in ♦ email: hsr.brahmana@yahoo.com

|| ಶಂಕರಂ ಶಂಕರಾಚಾರ್ಯಂ ಶೇಷಂ ರಾಮಾನುಜಂ ಮುನಿಮ್ । ವಾಯುಂ ಚ ಮಧ್ವಮಾಚಾರ್ಯಂ ಆಚಾರ್ಯತ್ರಯಮಾಶ್ರಯೇ ||

# ವಿಪ್ರಬಂಧು


ತ್ರೈಮಾಸಿಕ ಪತ್ರಿಕೆ – ಸಂಚಿಕೆ 21 – ಪುಟಗಳು 20

ಶ್ರೀ ವಿಶ್ವಾವಸು ಸಂವತ್ಸರ ಹೇಮಂತ ಋತು ಜನವರಿ 2026




## ಸಂಕ್ರಾಂತಿ, ಮಹಾಶಿವರಾತ್ರಿ ಹಾಗೂ ಯುಗಾದಿಯ ಶುಭಾಶಯಗಳು

BOOK-POST



With Best Compliments from:
SHASTRY'S BAKERY AND SWEETS
ಶಾಸ್ತ್ರೀಸ್ ಬೇಕರಿ ಮತ್ತು ಸಿಹಿ ತಿಂಡಿಗಳು
# 714/2, 7th Block, K.R. Road, Jayanagar, Bangalore - 560 070
ಸಂತಸದ ಸುದ್ಧಿ ನೂತನವಾಗಿ ಬನಶಂಕರಿ ಶಾಖೆ ತೆರೆಯಲಾಗಿದೆ
70, 46ನೇ ಅಡ್ಡರಸ್ತೆ, ಬನಶಂಕರಿ ಬಸ್ ನಿಲ್ದಾಣದ ಹತ್ತಿರ ಬನಶಂಕರಿ, ಬೆಂಗಳೂರು
ಸಾರ್ವಜನಿಕರಿಗೆ 33 ವರ್ಷಗಳಿಂದ ಶುದ್ಧ ಪದಾರ್ಥಗಳ ಅವಿರತ ಸೇವೆ. ಎಲ್ಲಾ ಶುಭ ಸಮಾರಂಭಗಳಿಗೆ ಶುದ್ಧವಾಗಿ, ರುಚಿಯಾಗಿ ಬೇಕರಿ ಹಾಗೂ ಸಿಹಿ ತಿನಿಸುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅವಶ್ಯಕತೆಗೆ ಅನುಗುಣವಾಗಿ ತಮ್ಮಲ್ಲಿಗೆ ತಲುಪಿಸಲಾಗುತ್ತದೆ.
ಪ್ರೊ : ಸಂತೇಶಿವರ ಜಯರಾಮು ಮತ್ತು ಸಹೋದರರು
ದೂರವಾಣಿ : 2676 4599
94486 85061, 94803 91152
99869 28281




With Best Compliments From
ರಕ್ಷಿತ್ ಆರೋಗ್ಯ ಮತ್ತು ಸಲಹಾ ಕೇಂದ್ರ
SERVING the humanity since 31 years......
RAKSHIT HEALTH AND COUNSELLING CENTER
" Certified Diabetes Counsellors "
1. #7, (76/1), 7th Cross, 27th Main, 1st Sector, HSR Layout, BANGALORE-560 102
Dr. B.S. LAKSHMI
BAMS (Ay), BAMS (Integrated)
CNCC (Childcare and Nutrition)
Mobile: 98455 18758
Dr. AMARNATH T.S.
BSAM (Ay), BAMS (Integrated)
PGDHR (Human Rights)
EMBA (Marketing)
Mobile: 98452 59809
Certificate
PRIME TIME
GLOBAL HEALTHCARE EXCELLENCE AWARDS 2013
Rakshit Health and Counselling Centre

## EXECUTIVE COMMITTEE

| | |
|---|---|
| **PRESIDENT** | |
| Ramesh A | : 90084 58078 |
| **VICE PRESIDENTS** | |
| Narasimhaiah V | : 94490 28618 |
| Prabhakar H C | : 98860 35210 |
| **SECRETARY** | |
| Narasimha Murthy A R | : 98445 68839 |
| **JOINT SECRETARIES** | |
| Dr Shyam Sundar G | : 94486 76442 |
| Anantha M S | : 99868 25761 |
| Raghunath N | : 98807 19764 |
| Govindraja Achar | : 98802 98031 |
| **TREASURER** | |
| Ajeya Krishna K R | : 99800 10021 |
| **EC MEMBERS** | |
| Anantha Ramu S | : 94480 55193 |
| Gururaja Rao S | : 94480 19249 |
| Srinivasa S V | : 70907 09946 |
| Harish Kumar K R | : 99452 73136 |
| Kousalendra S A P | : 94814 87304 |
| Subramanya H C | : 99024 83415 |
| Chethan N | : 98805 09396 |
| S K L N Prasanna | : 98863 94463 |
| Raghavendra R | : 94485 58482 |
| Sindu Priyadarshini A | : 98806 86492 |
| Divya Vinay | : 96110 80044 |
| **ADVISORS** | |
| Ramaswamy K | : 99009 48237 |
| Subbaramaiah C N | : 94481 89695 |
| Sridhara Rao H | : 96322 11611 |
| Natesh G S | : 94487 77770 |
| Balaprabha Karanth | : 99458 02609 |
| Krishna Murthy K S | : 99809 22776 |
| Manoj Karantha K | : 88804 43064 |
| Mohan Kumar K | : 94484 80472 |
| Sudhindra Bhat | : 98451 03951 |
| Murali V R | : 98440 33971 |

**Viprabandhu Editorial Committee**

| | |
|---|---|
| Sridhar Rao H. | 9632211611 |
| Nagalakshmi | 9741044599 |
| Natesh G.S. | 9448777770 |
| Narasimhaiah V. | 9449028618 |

hsr.viprabandhu@gmail.com

# ಅಧ್ಯಕ್ಷರ ನುಡಿ

ಸಂಘದ ಎಲ್ಲಾ ವಿಪ್ರರಿಗೂ ನಮಸ್ಕಾರಗಳು. ದಿನಾಂಕ 07.09.2025ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಮುಂದಿನ ತ್ರೈವಾರ್ಷಿಕಕ್ಕೆ (2025 ರಿಂದ 2028ರ ವರೆಗೆ) ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದಕ್ಕಾಗಿ ನಿಮಗೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಈ ಸಂದರ್ಭದಲ್ಲಿ, ದೇವರ ಕೃಪೆಯಿಂದ, ತಮ್ಮೆಲ್ಲರ ಹಾಗೂ ಎಲ್ಲಾ ಕಾರ್ಯಕಾರಿಣಿ ಸಮಿತಿ ಸದಸ್ಯರ ಸಹಕಾರದೊಂದಿಗೆ ಸಂಘವನ್ನು ಪ್ರಗತಿಯತ್ತ ಕೊಂಡೊಯ್ಯುವ ಭರವಸೆಯನ್ನು ನೀಡುತ್ತಿದ್ದೇನೆ.

ತಮ್ಮೆಲ್ಲರಿಗೂ ತಿಳಿದಂತೆ ದಾನಿಗಳಾದ ದಿವಂಗತ ಶ್ರೀ ಶಂಕರ ರೆಡ್ಡಿ ಎಂ. ರವರು ಯೋಗ ಗುರುಗಳಾದ ಶ್ರೀ. ಬಾಲಪ್ರಭಾ ದಿವಾಕರ ಕಾರಂತರ ಮೂಲಕ ಸಂಘಕ್ಕೆ ಹಾಲೀ ಗಾಯತ್ರೀ ಭವನವನ್ನು 15 ವರ್ಷಗಳ ಕಾಲ ಉಚಿತವಾಗಿ ಲೀಜ್‌ನಲ್ಲಿ ನೀಡಿರುವುದನ್ನು ಸ್ಮರಿಸಿ, ಇಲ್ಲಿ ಪ್ರತೀ ಶನಿವಾರ ಮತ್ತು ಭಾನುವಾರ ಬೆಳಗ್ಗೆ ನಡೆಯುವ ವೇದ ಪಾಠ ಮತ್ತು ಸಾರ್ವಜನಿಕರಿಗಾಗಿ, ಪ್ರತಿ ಸೋಮವಾರದಿಂದ ಶುಕ್ರವಾರದ ವರೆಗೆ ಜರುಗುವ ಉಚಿತ ಯೋಗಾಭ್ಯಾಸದ ತರಗತಿಗಳ ಪ್ರಯೋಜನವನ್ನು ಸದಸ್ಯರು ಹಾಗೂ ಕುಟುಂಬವರ್ಗದವರು ಪಡೆದುಕೊಳ್ಳಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಇದಲ್ಲದೆ, ಸನ್ಮಾನ್ಯ ಶಾಸಕರಾದ ಶ್ರೀ. ಎಂ. ಸತೀಶ್ ರೆಡ್ಡಿ ಯವರ ಪೂರ್ಣ ಸಹಕಾರದಿಂದ, ಸಂಘಕ್ಕೆ ಸ್ವಂತ ನಿವೇಶನ ಪಡೆಯಲು ಸಾಕಷ್ಟು ಪ್ರಯತ್ನವನ್ನು ನಡೆಸುತ್ತಿದ್ದು ಇದರ ಫಲ ಲಭಿಸಲೆಂದು ದೇವರಲ್ಲಿ ಪ್ರಾರ್ಥಿಸೋಣ. ಮುಂದಿನ ದಿನಗಳಲ್ಲಿ ಸಂಘದಿಂದ ಭಜನೆಯ ತರಗತಿ, ಉಚಿತ ಸಾರ್ವಜನಿಕ ಆರೋಗ್ಯ ತಪಾಸಣೆ, ವಾರ್ಷಿಕ ಸಾರ್ವಜನಿಕ ಕಾರ್ಯಕ್ರಮ, ಸಮುದಾಯದ ವಾರ್ಷಿಕ ಕಾರ್ಯಕ್ರಮ, ಸಂಘದ ಸದಸ್ಯರು ಹಾಗೂ ಕುಟುಂಬ ವರ್ಗದವರಿಂದ ಸಾಂಸ್ಕೃತಿಕ ಕಾರ್ಯಕ್ರಮ, ನಿಗದಿತ ಪೂಜಾ ಹಾಗೂ ಇನ್ನಿತರೇ ಕಾರ್ಯಕ್ರಮಗಳನ್ನು ತಮ್ಮೆಲ್ಲರ ಸಹಕಾರ ಮತ್ತು ಬೆಂಬಲದಿಂದ ಜರುಗಿಸಲಾಗುವುದು.

ಇದೇ ರೀತಿ ತಮ್ಮೆಲ್ಲರ ಮಾರ್ಗದರ್ಶನದಲ್ಲಿ ಸಂಘದ ಜವಾಬ್ದಾರಿಯನ್ನು ಪೂರೈಸುವ ಶಕ್ತಿಯನ್ನು ನನಗೆ ನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತಾ, ಮುಂಬರುವ ಹಬ್ಬ ಹರಿದಿನಗಳು ಹಾಗೂ ಹೊಸ ವರ್ಷ 2026 ತಮ್ಮೆಲ್ಲರಿಗೂ ಆರೋಗ್ಯ, ಸುಖ, ಶಾಂತಿ, ನೆಮ್ಮದಿ ಹಾಗೂ ಸಂತೋಷವನ್ನು ನೀಡಲೆಂದು ದೇವರಲ್ಲಿ ಕೋರುತ್ತಾ ನನ್ನ ಈ ಅಧ್ಯಕ್ಷರ ನುಡಿಯನ್ನು ಸಂಪನ್ನಗೊಳಿಸುತ್ತಿದ್ದೇನೆ.

ವಂದನೆಗಳೊಂದಿಗೆ,

**ರಮೇಶ್. ಎ**

**ಅಧ್ಯಕ್ಷರು**

# ಕಾರ್ಯದರ್ಶಿ ವರದಿ

ಎಲ್ಲರಿಗೂ ನಮಸ್ಕಾರಗಳು. ಹೊಸ ವರ್ಷ 2026 ತಮಗೆಲ್ಲರಿಗೂ ಆರೋಗ್ಯ, ಐಶ್ವರ್ಯ ಹಾಗೂ ನೆಮ್ಮದಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಸಂಘದ ನೂತನ ಕಾರ್ಯಕಾರಿಣಿ ಸಮಿತಿಯ ಅವಧಿ ಕಳೆದ ಸೆಪ್ಟೆಂಬರ್ ತಿಂಗಳಿಂದ ಪ್ರಾರಂಭವಾಗಿದೆ. ಎಲ್ಲಾ ಕಾರ್ಯಕಾರಿಣಿ ಸಮಿತಿಯ ಸದಸ್ಯರಿಗೆ ಹಾಗೂ ಸಲಹೆಗಾರರಿಗೆ ನನ್ನ ಅಭಿನಂದನೆಗಳು. ಎಲ್ಲರೂ ತಮ್ಮ ಶಕ್ತಿಗೂ ಮೀರಿ ಸಂಘದ ಕೆಲಸಗಳಲ್ಲಿ ತೊಡಗಿಸಿಕೊಂಡು ಸಂಘವನ್ನು ಮತ್ತಷ್ಟು ಮುಂದೆ ತರುವಲ್ಲಿ ಪ್ರಯತ್ನಿಸಬೇಕೆಂದು ಕೋರುತ್ತೇನೆ.

ಮುಂದಿನ ತ್ರೈಮಾಸಿಕದಲ್ಲಿ ಬರುವ ಮಕರಸಂಕ್ರಾಂತಿ, ಮಧ್ವನವಮಿ, ಶಿವರಾತ್ರಿ ಹಾಗೂ ಯುಗಾದಿ ಹಬ್ಬಗಳು ತಮಗೆಲ್ಲ ಆನಂದ ಹಾಗೂ ಉಲ್ಲಾಸ ತರಲಿ ಎಂದು ಪ್ರಾರ್ಥಿಸಿ, ಈ ತ್ರೈಮಾಸಿಕದಲ್ಲಿ ನಡೆದ ಕಾರ್ಯಕ್ರಮಗಳ ವರದಿಯನ್ನು ನೀಡುತ್ತಿದ್ದೇನೆ.

ದಿನಾಂಕ 17–11–2025 ರಂದು ಹೆಚ್.ಎಸ್.ಆರ್. ಬಡಾವಣೆ ಒಂದನೇ ಸೆಕ್ಟರ್‌ನ ಶ್ರೀವಿನಾಯಕ ಸಾಂಸ್ಕೃತಿಕ ಪ್ರತಿಷ್ಠಾನದ ಸಹಯೋಗದೊಂದಿಗೆ ಸಂಘವು ಕಡೇ ಕಾರ್ತಿಕ ಸೋಮವಾರದ ಪ್ರಯುಕ್ತ ಬಿಲ್ವಾರ್ಚನೆ ಹಾಗೂ ರುದ್ರಾಭಿಷೇಕದ ವಿಶೇಷ ಪೂಜೆಯನ್ನು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 150ಕ್ಕೂ ಹೆಚ್ಚು ಜನ ಪಾಲ್ಗೊಂಡು ಈಶ್ವರನ ಕೃಪೆಗೆ ಪಾತ್ರರಾಗಿದ್ದು ನಮಗೆ ಹೆಮ್ಮೆ ತಂದಿದೆ.

ನಿಮಗೆಲ್ಲಾ ತಿಳಿದಿರುವಂತೆ ಸಂಘವು ಪ್ರತಿ ಪ್ರದೋಷ ದಿನದಂದು ಸಂಘದ ಕಚೇರಿಯಲ್ಲಿ ಸಂಜೆ 6.00 ಗಂಟೆಯಿಂದ 8.00 ಗಂಟೆವಯರೆಗೂ ಪ್ರದೋಷ ಪೂಜೆ ನಡೆಸುತ್ತದೆ. ಇದರಲ್ಲಿ ಎಲ್ಲರೂ ಪಾಲ್ಗೊಳ್ಳಬೇಕಾಗಿ ವಿನಂತಿ.

ಪ್ರದೋಷ ಪೂಜೆ ಮಾಡಬಯಸುವವರು ಕಾರ್ಯಕಾರಿ ಸಮಿತಿಯ ಯಾವ ಸದಸ್ಯರನ್ನಾದರೂ ಸಂಪರ್ಕಿಸಬಹುದು.

ಸಂಘದ ಸ್ವಂತ ಜಾಗ / ಕಟ್ಟಡಕ್ಕೆ, ಅಮೆರಿಕದ ನ್ಯೂಜರ್ಸಿಯಲ್ಲಿ ನೆಲೆಸಿರುವ ನಮ್ಮ ವಿಪ್ರ ಸಮುದಾಯದ ಶ್ರೀಪ್ರಬೋಧ್ ಅವರು 25000/– ರೂ.ಗಳನ್ನು, ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ಶ್ರೀ ನವೀನ್ ಅವರು 10,000/– ರೂ.ಗಳನ್ನು ಮತ್ತು ದೆಹಲಿಯಲ್ಲಿ ವಾಸವಾಗಿರುವ ಹೆಚ್.ಎಸ್.ಆರ್ ಬಡಾವಣೆಯವರೇ ಆದ ಶ್ರೀಪ್ರಣವ್‌ರಾವ್ ಅವರು 10,000/–ರೂ.ಗಳನ್ನು ದೇಣಿಗೆಯಾಗಿ ಕೊಟ್ಟಿರುತ್ತಾರೆ. ಇವರೆಲ್ಲರಿಗೂ ವೈಯಕ್ತಿಕವಾಗಿ ಹಾಗೂ ಸಂಘದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಸದಸ್ಯರೆಲ್ಲರೂ ಈ ನಿಟ್ಟಿನಲ್ಲಿ ಪ್ರಯತ್ನಿಸಬೇಕೆಂದು ವಿನಂತಿ.

ಶ್ರೀ ವಿಷ್ಣುಶರಣ್ ಭಟ್, ಭೀಮ ಜ್ಯೂವೆಲ್ಲರ್ಸ್ ಅವರು 1,00,000/– ರೂ.ಗಳನ್ನು ದೇಣಿಗೆ ನೀಡಿ ಸಂಘದ 'ವಿಪ್ರ ಸೇವಾ ಶ್ರೇಷ್ಠ" ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ ಎಂದು ತಿಳಿಸುತ್ತಾ ಅವರನ್ನು ಆದರದಿಂದ ಸ್ವಾಗತಿಸುತ್ತೇವೆ.

ಹೊಸದಾಗಿ ನಮ್ಮ ಸಂಘಕ್ಕೆ ಸೇರಿದ ಸದಸ್ಯರು

1. ಶ್ರೀ ರಾಮಗೋಪಾಲ್ ಎಲ್. – ಸದಸ್ಯತ್ವ ಸಂಖ್ಯೆ 809
2. ಶ್ರೀ ಗುರುಮೋಹನ್ ಆರ್. – ಸದಸ್ಯತ್ವ ಸಂಖ್ಯೆ 810
3. ಶ್ರೀ ರಾಜೀವ್ ಬಿ.ಎ. – ಸದಸ್ಯತ್ವ ಸಂಖ್ಯೆ 811 (ಪೋಷಕರು)
4. ಶ್ರೀ ಶಂಕರ್ ಪಿ.ಬಿ. – ಸದಸ್ಯತ್ವ ಸಂಖ್ಯೆ 812
5. ಶ್ರೀಮತಿ ಆರಾಧನಾ ಕಡೆಕರ್ – ಸದಸ್ಯತ್ವ ಸಂಖ್ಯೆ 813
6. ಶ್ರೀ ಪ್ರದೀಪ್ ಕೆ. ಮರಾಲಿ – ಸದಸ್ಯತ್ವ ಸಂಖ್ಯೆ 814
7. ಶ್ರೀಮತಿ ಮಾಧವಿ ಲತಾ – ಸದಸ್ಯತ್ವ ಸಂಖ್ಯೆ 815
8. ಶ್ರೀ ಸುಬ್ರಹ್ಮಣ್ಯ ಪ್ರಸಾದ್ ಎಸ್. – ಸದಸ್ಯತ್ವ ಸಂಖ್ಯೆ 816
9. ಶ್ರೀಮತಿ ಜಾಹ್ನವಿ ವಿ. ಆಚಾರ್ಯ – ಸದಸ್ಯತ್ವ ಸಂಖ್ಯೆ 817
10. ಶ್ರೀಮತಿ ನಿರ್ಮಲಾ ರಾವ್ – ಸದಸ್ಯತ್ವ ಸಂಖ್ಯೆ 818
11. ಶ್ರೀಮತಿ ಮಂಜುಶ್ರೀ ಭಟ್ – ಸದಸ್ಯತ್ವ ಸಂಖ್ಯೆ 819
12. ಶ್ರೀಮತಿ ಜ್ಯೋತಿ ಎಸ್.ಎನ್. ರಾವ್ – ಸದಸ್ಯತ್ವ ಸಂಖ್ಯೆ 820
13. ಶ್ರೀ ಪ್ರಣವ್‌ರಾವ್ ಎನ್. – ಸದಸ್ಯತ್ವ ಸಂಖ್ಯೆ 821
14. ಶ್ರೀ ನರೇನ್ ಜೆ. – ಸದಸ್ಯತ್ವ ಸಂಖ್ಯೆ 822,

ಸಂಘದ ಎಲ್ಲಾ ಸದಸ್ಯರು ನಿಮ್ಮ ಕುಟುಂಬದಲ್ಲಿರುವ 18 ವರ್ಷ ತುಂಬಿದ ಎಲ್ಲರನ್ನೂ ಸಂಘದ ಸದಸ್ಯರನ್ನಾಗಿ ಮಾಡಬೇಕೆಂದು ಮನವಿ.

ಸಂಘದ ಹಿರಿಯ ಸದಸ್ಯರಾದ ಶ್ರೀ ಎಂ.ವಿ.ಸತ್ಯನಾರಾಯಣ ಅವರು ದಿನಾಂಕ 2/11/2025 ನಮ್ಮನ್ನು ಅಗಲಿದ್ದಾರೆ. ಅವರು ನಮ್ಮ ಸಂಘಕ್ಕೆ ನೀಡಿದ ಮಹತ್ತರ ಸೇವೆಯನ್ನು ಸ್ಮರಿಸುತ್ತಾ, ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತಿದ್ದೇವೆ.

ನಿಮ್ಮ ಬೆಂಬಲ ಹಾಗೂ ಸಹಕಾರ ನಮ್ಮ ಜೊತೆ ಸದಾ ಇರುತ್ತದೆ ಎಂಬ ನಂಬಿಕೆಯೊಂದಿಗೆ,

ಅ.ರಾ.ನ. ಮೂರ್ತಿ

ಕಾರ್ಯದರ್ಶಿ

# ಸಂಪಾದಕೀಯ

ಆತ್ಮೀಯ ವಿಪ್ರ ಬಂಧುಗಳೇ,

2026ನೇ ಹೊಸವರ್ಷದ ಶುಭಾಶಯಗಳೊಂದಿಗೆ ಒಂದೆರಡು ಮಾತುಗಳನ್ನು ಸಂಪಾದಕೀಯ ಮಂಡಳಿಯ ಪರವಾಗಿ ನಿಮ್ಮೊಂದಿಗೆ ಹಂಚಿಕೊಳ್ಳಲು ಇಚ್ಛಿಸುತ್ತೇನೆ. ವಿಪ್ರಬಂಧು ತ್ರೈಮಾಸಿಕ ಪತ್ರಿಕೆಯು ಕಳೆದ 20 ಸಂಚಿಕೆಗಳನ್ನು ಯಶಸ್ವಿಯಾಗಿ ಹೊರತಂದಿದೆ. ಒಂದು ರೀತಿಯಲ್ಲಿ, ಈ ಪತ್ರಿಕೆಯು ಸಂಘದ ಸಂವಹನ ಸೇತುವಾಗಿ, ನಮ್ಮ ಸಮುದಾಯದ ಕುಟುಂಬವನ್ನು ಒಗ್ಗೂಡಿಸಿದೆ. ಈ ಸಂಚಿಕೆಗಳನ್ನು ಹೊರ ತರುವಲ್ಲಿ ಪ್ರೋತ್ಸಾಹಕ ಪಾತ್ರ ನಿರ್ವಾಹಕರು ನಮ್ಮ ನೆಚ್ಚಿನ ಜಾಹಿರಾತುದಾರರು. ಅವರ ಅನವರತ ಬೆಂಬಲದಿಂದಲೇ ಈ ಪತ್ರಿಕೆ ಅಂದವಾಗಿ ಮುದ್ರಣಗೊಂಡು ಕಾಲ ಕಾಲಕ್ಕೆ ಸರಿಯಾಗಿ ವಿಪ್ರಬಂಧುಗಳ ಕೈ ಸೇರಲು ಸಾಧ್ಯವಾಗುತ್ತಿದೆ. ಅವರುಗಳಿಗೆ ಸಂಪಾದಕ ಮಂಡಳಿಯು ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತಿದೆ. ಪತ್ರಿಕೆಗೆ ಬೇಕಾದ ಲೇಖನಗಳನ್ನು, ವಿಶಿಷ್ಟ ಬರಹಗಳನ್ನು ನೀಡುತ್ತಿರುವ ಎಲ್ಲ ಬರಹಗಾರರಿಗೂ ನಾವು ಆಭಾರಿಯಾಗಿದ್ದೇವೆ. ಅಂದವಾಗಿ ಪತ್ರಿಕೆಯನ್ನು ಮುದ್ರಿಸಿಕೊಡುತ್ತಿರುವ ಸ್ಟ್ಯಾಂಡರ್ಡ್ ಪ್ರಿಂಟರ್ಸ್‌ನ ಶ್ರೀ ನಾಗರಾಜ್ ಅವರ ತಂಡಕ್ಕೂ ನಾವು ಋಣಿಯಾಗಿದ್ದೇವೆ.

'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ನಿತ್ಯ ಸತ್ಯಕ್ಕೆ ಮಿಗಿಲಾಗಿ ಒಗ್ಗಟ್ಟಿನ ಕಾರ್ಯದಲ್ಲಿ ಯಶಸ್ಸು ಇದೆ, ಗುರಿಯನ್ನು ತಲುಪಲುಬಹುದು ಮತ್ತು ಅಸಾಧ್ಯವನ್ನು ಸಾಧ್ಯವಾಗಿಸಬಹುದು ಎಂಬುದಕ್ಕೆ ನಮ್ಮ ಸುತ್ತಮುತ್ತಲ ಪ್ರಕೃತಿ ಮತ್ತು ಪರಿಸರ ಹಲವಾರು ಉದಾಹರಣೆಗಳನ್ನು ನಮ್ಮ ಮುಂದಿಟ್ಟಿದೆ. ಅದನ್ನು ಗಮನಿಸುವ ಮತ್ತು ಅಭ್ಯಸಿಸುವ ಪ್ರಯತ್ನವನ್ನು ನಾವು ಮಾಡಬೇಕು. ಉದಾಹರಣೆಗಾಗಿ ಇರುವೆಗಳು, ಶ್ರದ್ಧೆಯಿಂದ ತಮ್ಮ ಕರ್ತವ್ಯ ನಿಷ್ಠೆಯನ್ನು ಮೆರೆಯುತ್ತಾ, ತಮ್ಮ ಇರುವಿಕೆಗೆಂದು ಸಾಲುಸಾಲಾಗಿ ಮಣ್ಣನ್ನು ಹೊತ್ತುತಂದು ಪೇರಿಸಿ, ತಮ್ಮ ಗೂಡುಗಳನ್ನು, ಹುತ್ತಗಳನ್ನು ಕಟ್ಟುವುದನ್ನು ನಾವು ಕಾಣುತ್ತೇವೆ. ಅಷ್ಟು ಸಣ್ಣ ಜೀವಿಗಳು ಸತತ ಪರಿಶ್ರಮದಿಂದ, ಸಹಯೋಗದಿಂದ, ಕಾರ್ಯನಿರ್ವಹಣಾ ಕ್ಷಮತೆಯಿಂದ ಮಾತ್ರ ಅಂತಹ ವೈಭವಯುತವಾದ ಹುತ್ತ ಅಥವಾ ಗೂಡುಗಳನ್ನು ನಿರ್ಮಿಸಬಲ್ಲವು. ಅದೇ ನಮಗೆ ಮಾದರಿಯಾಗಬೇಕು. ಪ್ರಕೃತಿಯ ಆ ಪಾಠವನ್ನು ನಾವೂ ಅಳವಡಿಸಿಕೊಳ್ಳಬೇಕು.

ನಾವೆಲ್ಲರೂ ನಮ್ಮ ಸಂಘದ ಒಳಿತಿಗಾಗಿ, ಅಭಿವೃದ್ಧಿಗಾಗಿ, ಉತ್ತಮ ಸಂವಹನ, ಪರಿಶ್ರಮ ಮತ್ತು ಕಾರ್ಯ ಬದ್ಧತೆಯನ್ನು ರೂಢಿಸಿಕೊಳ್ಳಬೇಕೆಂಬುದು ಪ್ರತಿಯೊಬ್ಬ ವಿಪ್ರಬಂಧುವಿನ ಸಂಕಲ್ಪವಾಗಿರಬೇಕು. ಹಾಗಾದಾಗ, ಇನ್ನೂ ಹೆಚ್ಚಿನ ಉತ್ತಮ ಕಾರ್ಯಕ್ರಮಗಳನ್ನು, ಸಾಮಾಜಿಕ ಕರ್ತವ್ಯಗಳನ್ನು ಹೊಸದಾಗಿ ಆಯ್ಕೆಗೊಂಡ ಪ್ರಬಲ ನಿರ್ವಾಹಕ ತಂಡವು ಯಶಸ್ವೀಯಾಗಿ ನಿರ್ವಹಿಸಬಲ್ಲುದು. ಆದುದರಿಂದ ಸದಸ್ಯರೆಲ್ಲರೂ ಸಂಘದ ಶ್ರೇಯೋಭಿವೃದ್ಧಿಗಾಗಿ ಕಾರ್ಯೋನ್ಮುಖರಾಗಲು ಸಂಕಲ್ಪ ಮಾಡೋಣ, ಕಾರ್ಯಕಾರಿ ಸಮಿತಿಗೆ ಬೆನ್ನೆಲುಬಾಗಿ ನಿಲ್ಲೋಣ ಎಂದು ನಾನು ತಮ್ಮೆಲ್ಲರಲ್ಲೂ ವಿನಂತಿಸುತ್ತೇನೆ. ವಿಪ್ರ ಬಂಧುಗಳೆಲ್ಲರಿಗೂ ಭಗವಂತನು ಶುಭಫಲವನ್ನು ನೀಡಲಿ ಎಂದು ಸಂಪಾದಕೀಯ ಮಂಡಳಿಯ ಪರವಾಗಿ ಹಾರೈಸುತ್ತೇನೆ.

**ಹೆಚ್. ಶ್ರೀಧರರಾವ್**



# ಸಂಸಾರದ ಸ್ವರೂಪ – ಶಾಂಕರ ಭಾಷ್ಯಾಧಾರಿತ

"ಕಾಮ" ವಿಲಾಸವೇ ಸಂಸಾರ. ಶ್ರೀ ಶಂಕರರು ಭಗವದ್ಗೀತೆಯ 15ನೇ ಅಧ್ಯಾಯದ ಪುರುಷೋತ್ತಮ ಯೋಗದ ಭಾಷ್ಯದಲ್ಲಿ ಬರೆಯುತ್ತಾರೆ

**'ವಿರಕ್ತಸ್ಯ ಹಿ ಸಂಸಾರಾತ್ ಭಗವತ್ ತತ್ವಜ್ಞಾನೇ ಅಧಿಕಾರಃ ನಾನ್ಯಸ್ಯ ಇತಿ'**

ಸಂಸಾರದಲ್ಲಿ ವಿರಕ್ತನಾದವನಿಗೆ ಭಗವಂತನ ತತ್ವ (ಆತ್ಮತತ್ವ)ವನ್ನು ಅರಿತುಕೊಳ್ಳುವುದಕ್ಕೆ ಅಧಿಕಾರವಿರುವುದೇ ಹೊರತು ಮತ್ತೆ ಯಾರಿಗೂ ಇರುವುದಿಲ್ಲ. ಹಾಗಾದರೆ 'ಸಂಸಾರ' ಎಂದರೇನು?

ಲೌಕಿಕ ಭಾಷೆಯಲ್ಲಿ ಸಂಸಾರ ಎಂದರೆ ಹುಟ್ಟಿ, ಬೆಳೆದು, ಮದುವೆಯಾಗಿ, ಜೀವನಕ್ಕಾಗಿ ನೌಕರಿ ಮಾಡಿ, ಧನ ಆರ್ಜಿಸುತ್ತಾ, ಖರ್ಚು ಮಾಡುತ್ತಾ, ಮಕ್ಕಳನ್ನು ಪಡೆದು ಅವರನ್ನು ಬೆಳೆಸಿ ವಿದ್ಯಾರ್ಜನೆ ಮಾಡಿಸಿ, ಅವರ ಮದುವೆ ಮಾಡಿಸಿ, ಆ ಸುಖ–ದುಃಖಗಳಲ್ಲಿ ಪಾಲ್ಗೊಳ್ಳುವುದೇ ಮುಂತಾದ ಸಂಕುಚಿತ ಕ್ಷೇತ್ರವೇ ಆಗುತ್ತದೆ.

ನಾವು ನಮ್ಮ ನಮ್ಮ ಶಾಸ್ತ್ರದ ಪ್ರಕಾರ 'ಸಂಸಾರ' ಎಂದರೇನು? ಎಂಬುದನ್ನು ಅರಿತಾಗ, ಅಥವಾ ಲೌಕಿಕ ಸಂಸಾರದಿಂದ ವಿರಕ್ತನಾದಾಗ, 'ಆತ್ಮತತ್ವ'ವನ್ನು ಅರಿತುಕೊಳ್ಳುವ ಅಧಿಕಾರ ನಮಗೆ ಲಭಿಸುತ್ತದೆ, ಹೊರತು ಮತ್ತೆ ಯಾರಿಗೂ ಇರುವುದಿಲ್ಲ ಎಂಬ ಖಚಿತ ಸಂದೇಶವನ್ನು ಶ್ರೀ ಶಂಕರರು ಪ್ರತಿಪಾದಿಸಿದ್ದಾರೆ.


ಏಷಣೆ (Desire) ಗಳನ್ನು ಅಥವಾ "ಕಾಮ"ವನ್ನು ಹೊಂದಿರುವುದೇ ಸಂಸಾರ ಎಂದು ತಿಳಿಯಬೇಕು. ಏಷಣೆ (Desire) ಗಳು ಮೂರು – ಪುತ್ರ, ವಿತ್ತ, ಲೋಕ. ಪುತ್ರನಿಂದ ಮನುಷ್ಯ ಲೋಕವನ್ನು, ವಿತ್ತದಿಂದ ಪಿತೃ ಲೋಕವನ್ನು, ಉಪಾಸನೆಯಿಂದ ದೇವಲೋಕವನ್ನು ಪಡೆಯಬೇಕೆಂದು (ಅಂದರೆ ಹಿರಣ್ಯಗರ್ಭಾದಿ ದೇವತೆಗಳ ವಿಷಯವಾದ ಉಪಾಸನಾ ರೂಪ ವಿದ್ಯೆಯನ್ನೇ ವಿತ್ತ ಎಂದಿದೆ) ಭಗವದ್ಗೀತೆಯ 2ನೇ ಅಧ್ಯಾಯದ 70ನೇ ಶ್ಲೋಕವನ್ನು ವ್ಯಾಖ್ಯಾನಿಸುವಾಗ ಶ್ರೀ ಶಂಕರರು ಈ ರೀತಿಯಾಗಿ ಬರೆದಿರುತ್ತಾರೆಏಷಣೆಗಳನ್ನು ಬಿಟ್ಟು ಜ್ಞಾನಿಯಾಗಿರುವ, ಸ್ಥಿತಪ್ರಜ್ಞನಾಗಿರುವ ಯತಿಗೇ ಮೋಕ್ಷವು ಸಿಕ್ಕುವುದೇ ಹೊರತು, ಸನ್ಯಾಸಿಯಲ್ಲದೆ ಕಾಮುಗಳನ್ನು ಬಯಸುತ್ತಿರುವವನಿಗೆ ಸಿಕ್ಕುವುದಿಲ್ಲ. ಈ ವಿಚಾರವಾಗಿ ದೃಷ್ಟಾಂತವನ್ನು ಭಗವಂತನು ನೀಡಿದ್ದಾನೆ.

**ಆಪೂರ್ಯಮಾಣಮಚಲಪ್ರತಿಷ್ಠಮ್**
**ಸಮುದ್ರಮಾಪಃ ಪ್ರವಿಶಂತಿ ಯದ್ವತ್।**
**ತದ್ವತ್ಕಾಮಾ ಯಂ ಪ್ರವೀಶಂತಿ ಸರ್ವೇ**
**ನ ಶಾಂತಿಮಾಪ್ನೋತಿ ನ ಕಾಮಕಾಮೀ ॥ (2,70)**

ನೀರಿನಿಂದ ತುಂಬಿಕೊಳ್ಳುತ್ತಿದ್ದರೂ ಅಲ್ಲಾಡದೆ ನಿಂತಿರುವ ಸಮುದ್ರವನ್ನು ಹೇಗೆ ನದಿಯ ಪ್ರವಾಹಗಳು ಪ್ರವೇಶಿಸುತ್ತಿರುವವೋ ಹಾಗೆ ಕಾಮಗಳೆಲ್ಲವೂ ಯಾವಾತನನ್ನು ಪ್ರವೇಶಿಸುತ್ತಿರುವವೋ ಅವುಗಳನ್ನುಜಯಿಸಿದವನಿಗೆ ಶಾಂತಿಯು ಸಿಕ್ಕುವುದೆ ಹೊರತು ಕಾಮಗಳನ್ನು ಬಯಸುತ್ತಿರುವವಗೆ ಶಾಂತಿಯುಸಿಕ್ಕಲಾರದು.

ಕಾಮುಗಳನ್ನು ಎಂದರೆ ಬಯಸುವ ವಿಷಯುಗಳನ್ನೇ ಇಚ್ಛಿಸುತ್ತಿರುವ ಸ್ವಭಾವವುಳ್ಳವನು ಯಾವನೋ ಅವನು ಕಾಮಕಾಮಿಯು. ಅಂಥಹ ಸ್ವಭಾವವುಳ್ಳವನು ಶಾಂತಿ ಅಥವಾ ಮೋಕ್ಷವನ್ನು ಪಡೆಯುವುದೇ ಇಲ್ಲ ಎಂದರ್ಥ. ವಸ್ತುವಿನ ಅಥವಾ ಕ್ರಿಯೆಯ ವಿಷಯಗಳನ್ನೇ ಮನಸ್ಸಿನಲ್ಲಿ ಚಿಂತಿಸುತ್ತಿರುವುದು ಸಂಕಲ್ಪಕಾರಕವು. ಈ ಸಂಕಲ್ಪವೇ ಕಾಮಕ್ಕೆ ಕಾರಣವು. 'ಕಾಮ'ವೇ ಅನರ್ಥಕ್ಕೆಲ್ಲ ಮೂಲ ಎಂದು ಭಗವಂತನು ಭಗವದ್ಗೀತೆಯ 2ನೇ ಅಧ್ಯಾಯದ 62 ಮತ್ತು 63ನೇ ಶ್ಲೋಕಗಳಲ್ಲಿ ಹೀಗೆ ತಿಳಿಸಿರುತ್ತಾನೆ:

**ಧ್ಯಾಯತೋ ವಿಷಯಾನ್ಪುಂಸಃ**
**ಸಂಗಸ್ತೇಷೂಪಜಾಯತೇ ।**
**ಸಂಗಾತ್ಸಂಜಾಯತೇ ಕಾಮಃ**

**ಕಾಮಾತ್ಕ್ರೋಧೋಭಿಜಾಯತೇ॥ (2–62)**
**ಕ್ರೋಧಾದ್ಭವತಿ ಸಂಮೋಹಃ**
**ಸಂಮೋಹಾತ್ ಸ್ಮೃತಿ ವಿಭ್ರಮಃ ।**
**ಸ್ಮೃತಿಭ್ರಂಶಾದ್ಬುದ್ಧಿನಾಶಃ**
**ಬುದ್ಧಿನಾಶಾತ್ಪ್ರಣಶ್ಯತಿ ॥ (2–63)**

ವಿಷಯಗಳನ್ನು ಧ್ಯಾನಿಸುತ್ತಿರುವ ಪುರುಷನಿಗೆ ಅವುಗಳಲ್ಲಿ ಸಂಗವುಂಟಾಗುತ್ತದೆ, ಸಂಗದಿಂದ ಕಾಮವು ಉಂಟಾಗುತ್ತದೆ. ಕಾಮದಿಂದ ಕ್ರೋಧವು ಉಂಟಾಗುತ್ತದೆ. ಕ್ರೋಧದಿಂದ ಸಂಮೋಹವುಂಟಾಗುತ್ತದೆ. ಸಂಮೋಹದಿಂದ ಸ್ಮೃತಿ ವಿಭ್ರಮವಾಗುತ್ತದೆ. ಸ್ಮೃತಿವಿಭ್ರಂಶದಿಂದ ಬುದ್ಧಿನಾಶವಾಗುತ್ತದೆ. ಬುದ್ಧಿನಾಶದಿಂದ ವಿನಾಶವನ್ನು ಹೊಂದುತ್ತಾನೆ. ಹೀಗೆ ಇದೆ ಕಾಮದ ವೈಭವ.

ಮುಂದೆ ಶ್ರೀಶಂಕರರು ಸಂಸಾರದ ಗತಿಗಳ ವಿಷಯಗಳನ್ನು ಹೀಗೆ ಹೇಳುತ್ತಾರೆ: ಸಂಸಾರದ ಗತಿಗಳಾಗಿರುವ ಅವ್ಯಕ್ತವು ಮೊದಲಾಗಿ ಸ್ಥಾವರದವರೆಗೆ ಇರುವ (ಅವ್ಯಕ್ತವು ಅತ್ಯಂತ ಉತ್ತಮವಾದ ಗತಿ: ಸ್ಥಾವರವು ಅತ್ಯಂತ ನೀಚವಾದ ಗತಿ). ವ್ಯಾಕೃತ – ಅವ್ಯಾಕೃತ ರೂಪವಾಗಿರುವ (ಅವ್ಯಾಕೃತ ಅಥವಾ ಅವ್ಯಕ್ತವು ನಾಮ ರೂಪಗಳ ಬೀಜಸ್ಥಿತಿ, ಬಿಡಿಬಿಡಿಯಾಗಿರುವ ನಾಮರೂಪಗಳೆಲ್ಲ ಬೀಜ ಸ್ಥಿತಿಯೇ, ಬ್ರಹ್ಮಾದಿಯಾಗಿ ಸ್ಥಾವರದವರೆಗಿನ ಜನ್ಮಗಳೆಲ್ಲಾ ವ್ಯಾಕೃತ ರೂಪವಾಗಿರುವ ಕರ್ಮಫಲಗಳು) ಬೀಜಾಂಕುರಗಳಂತೆ ಒಂದೊಂದರ ಉತ್ಪತ್ತಿಗೆ ಒಂದೊಂದು ಕಾರಣವಾಗಿರುವ (ವ್ಯಾಕೃತ ಅವ್ಯಾಕೃತ ಇವುಗಳು ಅಜ್ಞಾನ ಇರುವವರೆಗೂ ಒಂದಕ್ಕೊಂದು ಕಾರಣವಾಗಿರುವವು). ವ್ಯಾಕೃತ ಅವ್ಯಾಕೃತ ಪ್ರವಾಹವೇ ಸಂಸಾರವು.

ಸಂಸಾರದ ಧರ್ಮಗಳು – (1) ಕರ್ಮವನ್ನು ಮಾಡುವುದು (2) ಲೋಕಾಂತರ ಜನ್ಮಾಂತರಗಳನ್ನು ಪಡೆಯುವುದು (3) ಸುಖ ದುಃಖಗಳನ್ನು ಹೊಂದುವುದು.

ಜಗತ್ತು ಕಾರ್ಯವು, ಅವ್ಯಾಕೃತವು ಕಾರಣವು, ಎರಡೂ ಅವಿದ್ಯಾ ಕಲ್ಪಿತವೇ, ಅವಿದ್ಯಾ ನಿಮಿತ್ತವಾದ, ವಿಭಾಗ ಶಕ್ತಿಯಾದ ಅವ್ಯಾಕೃತವನ್ನು ಅನುಮಾನದಿಂದ ತಿಳಿಯಬೇಕಾಗಿದೆ.

ಈ ಸಂಸಾರವೆಂಬ ವೃಕ್ಷಕ್ಕೆ ಕರ್ಮವೇ ಬೀಜವು, ಅವಿದ್ಯೆಯೇ ಕ್ಷೇತ್ರವು, ಇದನ್ನು ಬೇರು ಮಟ್ಟ ಕಿತ್ತು ಹಾಕಬೇಕೆಂಬ ಕಾರಣದಿಂದ, ಬೇರಿನಂತಿರುವ ಅವ್ಯಾಕೃತವೂ, ವೃಕ್ಷದಂತಿರುವ ಸಂಸಾರವೂ ಮಿಥ್ಯೆ ಎಂಬುದನ್ನು ತಿಳಿಯುವುದಕ್ಕಾಗಿ ಅವ್ಯಾಕೃತ ವಿಚಾರವನ್ನು ತಿಳಿಸಿದೆ. ಆದ್ದರಿಂದಲೇ ವಿದ್ಯೆಯಿಂದ ಅದನ್ನು ಕಿತ್ತು ಹಾಕಲು ಸಾಧ್ಯ ಎಂಬ ಭಾವ.

ಭಗವದ್ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಭಗವಂತನು ಸಂಸಾರ ವೃಕ್ಷವನ್ನು ಹೀಗೆ ತಿಳಿಸಿರುತ್ತಾನೆ.

**ಊರ್ಧ್ವಮೂಲಮಧಃಶಾಖಮ್**
**ಅಶ್ವತ್ಥಂ ಪ್ರಾಹುರವ್ಯಯಮ್।**
**ಛಂದಾಂಸಿ ಯಸ್ಯ ಪರ್ಣಾನಿ**
**ಯಸ್ತಂ ವೇದ ಸ ವೇದವಿತ್॥ (15–1)**

ಮೇಲುಗಡೆ (ಶ್ರೇಷ್ಠವಾದ) ಮೂಲವುಳ್ಳದ್ದೂ, ಕೆಳಗಡೆ ಶಾಖೆಗಳುಳ್ಳದ್ದು ಆದ ಅಶ್ವತ್ಥವೃಕ್ಷವುಅವ್ಯಯವಾಗಿರುವುದೆನ್ನುವರು. ಅದರ ಎಲೆಗಳು ಛಂದಸ್ಸುಗಳು. ಅದನ್ನು ಯಾವನು ಅರಿತುಕೊಳ್ಳುವನೋ ಅವನು ವೇದವನ್ನು ಬಲ್ಲವನು. ಸಂಸಾರಕ್ಕೆ ಕಾರಣ ಶೋಕ ಮೋಹಗಳೆಂಬ ದೋಷಗಳು. ಅವಿದ್ಯೆಯೇ ಕಾರಣವು. ಸಂಸಾರವು ಅವಿದ್ಯೆಯಿಂದ ತೋರುತ್ತಿರುವ ಕಾರ್ಯವು. ಶೋಕ, ಮೋಹ ಇವೆರಡೂ ಸಂಸಾರಕ್ಕೆ ಬೀಜವಾಗಿರುತ್ತವೆ. ಇವುಗಳನ್ನು 'ಆತ್ಮಜ್ಞಾನ ಪಡೆಯುವುದರಿಂದಲೇ' ತೊಲಗಿಸಬೇಕು. ಅಧ್ಯಾಸ / ತಪ್ಪು ತಿಳುವಳಿಕೆಯೇ ಕಾಮದ ಮೂಲವಾಗಿ ಕರ್ಮಕ್ಕೆ ಕಾರಣವಾಗಿರುವುದರಿಂದ ಜ್ಞಾನದಿಂದ (ಸರಿಯಾದ ತಿಳುವಳಿಕೆಯಿಂದ) ಅಜ್ಞಾನವು ಹೋದರೆ ಸಂಸಾರವು (ಕಾಮ) ತೊಲಗುತ್ತದೆ ಎಂಬ ಭಾವಕರ್ಮವನ್ನು ನಿಷ್ಕಾಮವಾಗಿ ಮಾಡಿದರೆ ಚಿತ್ತ ಶುದ್ಧಿಯಿಂದ ಜ್ಞಾನಕ್ಕೆ ಯೋಗ್ಯತೆ ಉಂಟಾಗುವುದು.

ಶ್ರೀಶಂಕರರು 'ಕ್ರಿಯೆ, ಕಾರಕ, ಫಲ ಇವುಗಳ ಸ್ವರೂಪವಾಗಿರುವ ಸತ್ವ, ರಜಸ್ಸು, ತಮಸ್ಸುಎಂಬ ಗುಣಗಳ ಕಾರ್ಯವಾಗಿದ್ದು,

Sports Orthopedics Institute
1084, 18th Cross, 14th Main, Sector 3, HSR Layout, Bangalore-560102
www.sportsorthopedics.in/book-appointment
Phone: 9008520831

SOI Sports Orthopedics Institute Bengaluru

"One Stop Solution for all yourOrthopaedics and Sports Injuries". Keyhole Surgeries, Joint replacements, Physiotherapy & More

Dr. Naveen Kumar LV
MBBS, MS Orth, FRCS Orth (Eng), MCh Hip & Knee (UK), MSc Orth (UK), Dip SICOT (Italy), FEBOT (Portugal), MRCGP (UK), Dip FIFA SM (Switzerland), (FSEM (UK))

ಅವಿದ್ಯೆಯಿಂದ ಕಲ್ಪಿತವಾಗಿರುವ ಒಟ್ಟು ಸಂಸಾರವೆಂಬ ಕಲ್ಪನೆಯಿಂದ 'ಊರ್ಧ್ವ ಮೂಲ…, ಮುಂತಾದ ಶ್ಲೋಕಗಳಿಂದಲೂ ಇದನ್ನು ಉದಾಹರಿಸಿದ್ದಾರೆ.


ಈ ಸಂಸಾರಕ್ಕೆ ವೃಕ್ಷವೆಂದು ಹೇಳಲು ಕಾರಣವೇನೆಂದರೆ "ರಕ್ಷೇತಿ ಇತಿ ವೃಕ್ಷಃ:" ವ್ಯುತ್ಪತ್ತಿಗನುಸಾರವಾಗಿ ಅರ್ಥ ಭೇದಿಸಲ್ಪಡುವುದರಿಂದ ಇದಕ್ಕೆ (ಸಂಸಾರಕ್ಕೆ) ವೃಕ್ಷವೆಂದು ಹೆಸರು. ಶ್ರೀ ಶಂಕರರು ಹೀಗೆ ಹೇಳುತ್ತಾರೆ – "ಕಥಂ ಭೂತಾ: ತತ್ಪದಂ ಗಚ್ಛಂತಿ ಇತಿ". – ಆ ಪದವನ್ನು ಎಂಥವರು ಸೇರುತ್ತಾರೆ ಎಂದರೆ ಭಗವಂತನು ಭಗವದ್ಗೀತೆಯ 15ನೇ ಅಧ್ಯಾಯದ 5ನೇ ಶ್ಲೋಕದಲ್ಲಿ ಹೇಳುತ್ತಾನೆ".

**ನಿರ್ಮಾನಮೋಹಾ ಜಿತಸಂಗದೋಷಾಃ**
**ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ।**
**ದ್ವಂದ್ವೈರ್ವಿಮುಕ್ತಾಃ ಸುಖದುಃಖ ಸಂಜ್ಞೈಃ**
**ಗಚ್ಛಂತ್ಯಮೂಢಾಃ ಪದಮವ್ಯಯಂ ತತ್॥ (15–5)**

ನಿರ್ಮಾನಮೋಹರೂ, ಜಿತಸಂಗದೋಷರೂ, ಅಧ್ಯಾತ್ಮ ನಿತ್ಯರೂ, ವಿನಿವೃತ್ತಕಾಮರೂ, ಸುಖದುಃಖಗಳೆಂಬ ಹೆಸರಿನ ದ್ವಂದ್ವಗಳಿಂದ ವಿಮುಕ್ತರೂ ಆಗಿರುವ ಮೂಢರೂ (ಮೋಹವಿಲ್ಲದ ಜನರು) ಆ ಅವ್ಯಯವಾದ ಪದವನ್ನು ಸೇರುತ್ತಾರೆ.

**ಸಂಸಾರದ ಸ್ವರೂಪದ ತಾತ್ಪರ್ಯ:** ಬ್ರಹ್ಮಕ್ಕಿಂತ ಭಿನ್ನವಾದ ಯಾವುದೇ ಪರಮಾರ್ಥ ತತ್ತ್ವವಿಲ್ಲ. ಬ್ರಹ್ಮವು ಎಲ್ಲವೂ ಆಗಿರುವುದು. ಸತ್–ಚಿತ್–ಆನಂದ ತತ್ತ್ವಜೀವವೆಂಬುದು ಪರಮಾರ್ಥವಲ್ಲ, ಕೇವಲವ್ಯಾವಹಾರಿಕ ಮಟ್ಟದ ಸತ್ಯವಷ್ಟೇ ಇದು ಕೇವಲ ಬ್ರಹ್ಮದಲ್ಲಿ ಭಾಸವಾಗುವ ಭ್ರಮೆತರಂಬ ತೋರಿಕೆ, ಅಧ್ಯಾಸ (Super imposition) ಅಧ್ಯಾಸಕ್ಕೆ ಕಾರಣ ಅವಿದ್ಯೆ. ಇದು ಮೂಲಭೂತವಾದ ಅಜ್ಞಾನ. ಅಧ್ಯಾಸದ ಮೂಲ ಅವಿದ್ಯೆಯಲ್ಲಿದೆ. ಈ ಅವಿದ್ಯೆಯಿಂದಾಗಿಯೇ ಬ್ರಹ್ಮವೇ ಆದ ಜೀವಕ್ಕೆ ಕರ್ತೃತ್ವ (doership) ಮತ್ತು ಭೋಕ್ತೃತ್ವ (enjoyment) ಸತ್ವಗಳು ಒದಗಿ ಸಂಸಾರದ ಸ್ವರೂಪವಾಗಿ ಬಂಧನವುಂಟಾಗುತ್ತದೆ. ಉದಾ: ಒಂದೇ ಕೊಳಾಯಿಯಿಂದ ಬಂದ ನೀರು ಅಡುಗೆಯ ಮನೆ, ಬಚ್ಚಲ ಮನೆಗೆ ಪೊರೈಕೆಯಾದ ಮೇಲೆ ಆಯಾ ನೀರಿನ ಪಾತ್ರೆಗಳಲ್ಲಿರುವುದನ್ನು ಇದು ಅಡುಗೆಯ ನೀರು, ಇದು ಸ್ನಾನದ ನೀರು, ಎಂದು ಕೃತಕವಾಗಿ ವಿಭಾಗವಾಡುವುದನ್ನಿಲ್ಲಿ ಸ್ಮರಿಸಬಹುದು. ಜೀವನು ಅನ್ನಮಯ(food/physical body), ಪ್ರಾಣಮಯ (vital energy/breath body), ಮನೋಮಯ (mental/emotional body), ವಿಜ್ಞಾನಮಯ (intellectual /wisdom body), ಆನಂದಮಯ (bliss body) ಕೋಶಗಳಲ್ಲಿ ಮನೆ ಮಾಡಿಕೊಂಡಿದ್ದಾನೆ. ಈ ಕೋಶಗಳು ಕ್ರಮವಾಗಿ ಸ್ಥೂಲಶರೀರ, ಶಾರೀರಿಕ ವ್ಯಾಪಾರಗಳು, ಮನಸ್ಸಿನ ಊಹಾಪೋಹಗಳು, ಬುದ್ಧಿಯ ಆಲೋಚನೆಗಳು ಮತ್ತುಭೋಕ್ತೃತ್ವ ನಾನಿದ್ದೇನೆಂಬ ಭಾವದ ಸುಖ–ದುಃಖಗಳನ್ನು ಪ್ರತಿನಿಧಿಸುತ್ತವೆ. ಜಾಗ್ರತ್ (ಎಚ್ಚರ), ಸ್ವಪ್ನ (ಕನಸು) ಸುಷುಪ್ತಿ (ಗಾಢನಿದ್ರೆ) ಎಂಬ ಮೂರು ಪರಸ್ಪರ ಸ್ವತಂತ್ರ ಅವಸ್ಥೆಗಳಲ್ಲಿಯೂ ಜೀವನು ಪಂಚಕೋಶಸ್ಥಿತನಾಗಿಯೇ ಇರುತ್ತಾನೆ. ಆದರೆ ಈ ಮೂರು ಅವಸ್ಥೆ ಐದು ಕೋಶಗಳಲ್ಲಿಯೂ ಇರುವ ಸ್ಥಿತಿಯು ನಿಜವಾದ ಸ್ವರೂಪವಲ್ಲ. ನಿಜವಾದ ಸ್ವರೂಪ ತುರಿಯವೆಂಬ ನಾಲ್ಕನೆಯ ಅವಸ್ಥೆಯಲ್ಲಿ ಆನಂದಕೋಶವನ್ನು ಮೀರಿದ ಸ್ಥಳದಲ್ಲಿ ಅನುಭವಕ್ಕೆ ಬರುತ್ತದೆ. ಜೀವಾತ್ಮನು ವಸ್ತುತಃ ಪರಮಾತ್ಮ ಬ್ರಹ್ಮನೇ ಆಗಿದ್ದರೂ ಅದು ಗೋಚರವಾಗದಿರುವುದಕ್ಕೆ ಅವಿದ್ಯೆಯೇ ಕಾರಣವೆಂದು ಶ್ರೀ ಶಂಕರರು ಹೇಳಿದ್ದಾರೆ. ಅಧ್ಯಾಸ ಅವಿದ್ಯೆಯಿಂದ ಹುಟ್ಟುತ್ತದೆ. ಆಧ್ಯಾರೋಪದಲ್ಲಿ ದೃಕ್ ಮತ್ತು ದೃಶ್ಯ ಎಂಬುದಾಗಿ ವಿಭಾಗ ಮಾಡಿ, ದೃಶ್ಯ ವಿಭಾಗದಲ್ಲಿ (ಪ್ರಕೃತಿ), ಮಹತ್, ಅಹಂಕಾರ, ಮನಸ್ಸು ಪಂಚಜ್ಞಾನೇಂದ್ರಿಯ, ಪಂಚತನ್ಮಾತ್ರ ಮತ್ತು ಪಂಚಮಹಾಭೂತ ನಿರೂಪಣೆ ಕಂಡುಬಂದರೂ ಅದಿಷ್ಠಾನವೂ ದೃಕ್‌ತತ್ತ್ವವೂ ಆದ ಬ್ರಹ್ಮನಲ್ಲಿ ಅವಸ್ತುವಾದ ದೃಶ್ಯದ ಅಧ್ಯಾಸ ಮಾಡಲಾಗಿದೆ. ಇಂತಹ ಮಿಥ್ಯಾ ಪ್ರತ್ಯಯ–ರೂಪವಾದ ಅಧ್ಯಾರೋಪವನ್ನುನಿವಾರಿಸುವುದಕ್ಕಾಗಿಯೇ ಆತ್ಮಕತ್ವ ವಿದ್ಯೆಯನ್ನು ಶ್ರೀಶಂಕರರುಪ್ರತಿಪಾದಿಸಿದ್ದಾರೆ.

**– ಸುಂದರೇಶ್ ಅಯ್ಯರ್**



## ಬರವಣಿಗೆ


ಕಂಪ್ಯೂಟರ್ ಮತ್ತು ಮೊಬೈಲ್‌ಗಳ ಈ ಯುಗದಲ್ಲಿ ಕೈಯಿಂದ ಬರೆಯುವವರು ಬಹಳ ಕಡಿಮೆಯಾಗಿದ್ದಾರೆ. ನಾನು ಕೈಬರಹ ತಜ್ಞ ಎಂದು ಹೇಳಿದರೆ, ಹಲವರ ಪ್ರತಿಕ್ರಿಯೆ "ಅಯ್ಯೋ ನಾನು ಬರೆದು ಹಲವು ವರ್ಷಗಳೇ ಕಳೆದವು". ಇದೇನು ಆಶ್ಚರ್ಯಕರ ವಿಚಾರ ಅಲ್ಲ. ಆದರೆ, ಬರೆಯುವುದು ಮನುಜನಿಗೆ ಎಷ್ಟು ಪ್ರಯೋಜನಕಾರಿ ಎಂಬುದು ನಿಮಗೇನಾದರೂ ಗೊತ್ತೆ? ಬನ್ನಿ ತಿಳಿಯೋಣ.

ಶಾಲಾಕಾಲೇಜುಗಳಲ್ಲಿ ಬರವಣಿಗೆಯ ಬಳಕೆ ಪ್ರಮುಖವಾಗಿ ಪರೀಕ್ಷೆ ಬರೆಯಲು ಮತ್ತು ಪತ್ರದ ಮಾಪನಕ್ಕೆ ಬಳಕೆಯಾಗುತ್ತಿದೆ. ಸಾಕಷ್ಟು ಪರೀಕ್ಷೆಗಳು ಇಂದು ಆನ್–ಲೈನ್ ನಡೆಯುತ್ತಿವೆ. ಇಂತಹ ಕ್ರಮಗಳು ವ್ಯವಸ್ಥೆಯ ದೃಷ್ಟಿಯಿಂದ ಅನುಕೂಲಕರವೆನಿಸಿದರೂ ಸಹ, ಇದರಿಂದ ವಿದ್ಯಾರ್ಥಿಗಳಿಗೆ ಆಗುವ ನಷ್ಟದ ಅಂದಾಜು ನಮಗಿಲ್ಲ. ಬರೆಯುವುದು ಒಂದು ಸೂಕ್ಷ್ಮ ಚಲನಾ ಕೌಶಲ್ಯವಾಗಿದ್ದು, ಇದರ ಬಳಕೆ ನಮ್ಮ ಮೆದುಳಿನ ಮೇಲೆ ಲಾಭದಾಯಕ ಪರಿಣಾಮ ಮಾಡುತ್ತವೆ. ನಮ್ಮ ಶಿಕ್ಷಕರು ಹೇಳುತ್ತಿದ್ದ ಮಾತುಗಳನ್ನು ಇಲ್ಲಿ ನೆನೆಯಿರಿ, "ಒಂದು ಸಾರಿ ಬರೆಯುವುದು ಹತ್ತು ಬಾರಿ ಓದುವುದಕ್ಕೆ ಸಮ". ಹೌದು, ಬರೆಯುವುದು ನಮ್ಮ ಜ್ಞಾಪಕ ಶಕ್ತಿಯನ್ನು ಬಲಪಡಿಸುತ್ತದೆ.

ಪ್ರಯೋಗಾಲಯದಲ್ಲಿ ಬೆರಳಚ್ಚು (ಟೈಪಿಂಗ್), ನೋಡಿ ಬರೆಯುವುದು, ಕೇಳಿ ಬರೆಯುವುದು ಮತ್ತು ಯೋಚಿಸಿ ಬರೆಯುವುದು ಈ ಪ್ರಕ್ರಿಯೆಗಳಲ್ಲಿ ಮೆದುಳಿನ ಮೇಲೆ ಆಗುವ ಪರಿಣಾಮದ ಬಗ್ಗೆ ಒಂದು ಸಂಶೋಧನೆ ನಡೆಸಿದಾಗ ಕಂಡುಬಂದ ವಿಶೇಷವೇನೆಂದರೆ, ಯೋಚಿಸಿ ಬರೆಯುವುದು ಮೆದುಳಿನ ಅತಿಹೆಚ್ಚಿನ ಕೇಂದ್ರಗಳನ್ನು ಪ್ರಚೋದಿಸಿತು. ನರತಂತುಗಳ ಈ ಸಂಚಲನ ಮೆದುಳು ಹೆಚ್ಚಿನ ಪ್ರಮಾಣದ ಸಾಮರ್ಥ್ಯವನ್ನು ಬೆಳೆಸಲು ಅನುವು ಮಾಡಿ ಕೊಟ್ಟಿತು.

ಆದುದರಿಂದ, ಬರವಣಿಗೆ ಕೇವಲ ಸಂವಹನದ ಮಾಧ್ಯಮ ಮಾತ್ರವಲ್ಲ, ಅದು ಇತರೇ ಹಲವು ರೀತಿಯಲ್ಲಿ ನಮಗೆ ಉಪಕಾರಿ.

ಮನಃಶಾಸ್ತ್ರಜ್ಞರು ಸುಮಾರು ಎರಡು ಶತಮಾನಗಳಿಂದ ಬರೆಸುವುದನ್ನು ತಮ್ಮ ಚಿಕಿತ್ಸಾ ವಿಧಾನದಲ್ಲಿ ಬಳಸುತ್ತ ಬಂದಿದ್ದಾರೆ. ಮುಂದೆ ಇದು ದಿನಚರಿ ಬರೆಯುವ ಅಭ್ಯಾಸವಾಗಿ ಹಲವರು ಮುಂದುವರೆಸಿದ್ದಾರೆ. ಇಂದಿಗೂ ಸಹ ದಿನಚರಿ ಬರೆಯುವುದು, ಭಾವನೆಗಳ ವಿಶ್ಲೇಷಣೆ (CBT) ಮುಂತಾದವಕ್ಕೆ ಬರವಣಿಗೆ

With Best Compliments From
Viprayan Grindtek Pvt. Ltd. Bengaluru
Manufacturers of Speciality Grinding Wheels
Contact: email : info@viprablr.com
VIPRAYAN GRINDTEK
Mobile:
9845040755
9980945373


ಪ್ರಮುಖ ಮಾಧ್ಯಮ. ನಮ್ಮ ಭಾವನೆಗಳನ್ನು ಬರೆದು ಪ್ರಕಟಿಸಿದಾಗ ನಮ್ಮ ಮನದಾಳದ ಒತ್ತಡ ನಿವಾರಣೆಯಾಗುವುದು ನಾವು ನೋಡಬಹುದು.

ಭಾರತೀಯ ಸಂಸ್ಕೃತಿಯಲ್ಲಿ ಬರೆಯುವ ಅಭ್ಯಾಸವನ್ನು ದಿನಚರಿಯ ಭಾಗವಾಗಿ ಅಳವಡಿಸಿದ್ದಾರೆ. ಪ್ರತಿದಿನ ರಾಮನಾಮ, ಪಂಚಾಕ್ಷರಿ ಮಂತ್ರ ಬರೆಯುವವರನ್ನು ನಾವು ಇಂದಿಗೂ ನೋಡಬಹುದು. ಧಾರ್ಮಿಕ ಕ್ಷೇತ್ರಗಳು, ಮಠಮಾನ್ಯಗಳು ಸಹ ರಾಮಕೋಟಿ, ಗೀತಾಲೇಖನ ಮುಂತಾದ ಅಭಿಯಾನಗಳ ಮೂಲಕ ಜನರಲ್ಲಿ ಬರೆಯುವ ಪರಿಪಾಠವನ್ನು ಜೀವಂತವಾಗಿ ಇರಿಸಿದ್ದಾರೆ.

ಲಿಖಿತ ಜಪ ಅಥವಾ ಲಿಖಿತ ನಾಮ ಜಪ ಎಂದು ಕರೆಯುವ ಈ ವಿಧಾನಕ್ಕೆ ಆಧ್ಯಾತ್ಮ, ಮನಃಶಾಸ್ತ್ರ ಮತ್ತು Graphology (ಕೈಬರಹ ವಿಶ್ಲೇಷಣೆಯ ವಿಜ್ಞಾನ) ಇವುಗಳ ಸೂತ್ರಗಳನ್ನು ಅಳವಡಿಸಿ ನಾವು ಸ್ಕ್ರಿಪ್ಟ್ ಸಾಧನಾ (Script Saadhana) ಎನ್ನುವ ಕಾರ್ಯಕ್ರಮವನ್ನು ಅಭಿವೃದ್ಧಿ ಪಡಿಸಿದ್ದೇವೆ. ಸುಮಾರು ಹನ್ನೆರಡು ವರ್ಷಗಳ ಅವಧಿಯ ಸಂಶೋಧನೆ ನಡೆಸಿದ ಸಂದರ್ಭದಲ್ಲಿ ಶಾಲಾಮಕ್ಕಳಾದಿಯಾಗಿ ಹಲವರು ಇದರಲ್ಲಿ ಭಾಗವಹಿಸಿದ್ದಾರೆ ಮತ್ತು ಪ್ರಯೋಜನ ಪಡೆದಿದ್ದಾರೆ.

ಬರೆಯುವುದು ಕೇವಲ ಸಂವಹನದ ಮಾಧ್ಯಮ ಮಾತ್ರವಲ್ಲ, ಬರೆಯುವುದರಿಂದ ಮಾನಸಿಕ ಒತ್ತಡ ಕಡಿಮೆ ಮಾಡಲು ಸಹಾಯವಾಗುತ್ತದೆ ಮತ್ತು ನಮ್ಮ ಮಾನಸಿಕ ಆರೋಗ್ಯ ಸುಸ್ಥಿತಿಯಲ್ಲಿ ಇರುತ್ತದೆ ಎನ್ನುವುದು ನಾವು ಸದಾ ನೆನಪಿಡಬೇಕು. ನೀವೂ ಬರೆಯಿರಿ, ನಿಮ್ಮ ಮಕ್ಕಳಿಗೂ ಬರೆಯುವ ಅಭ್ಯಾಸ ಮಾಡಿಸಿ.

**"ದೇಹದ ಆರೋಗ್ಯಕ್ಕೆ ಪ್ರತಿದಿನ ನಡೆಯಿರಿ,**
**ಮನಸ್ಸಿನ ಆರೋಗ್ಯಕ್ಕೆ ಪ್ರತಿದಿನ ಬರೆಯಿರಿ"**

**ಶಿವಾನಂದ ನಾಯಕ**
ಸೀತಾನದಿ ಮನಃಶಾಸ್ತ್ರಜ್ಞರು ಮತ್ತು ಕೈಬರಹ ತಜ್ಞ
(Collector ARN Murthy)



# ಜ್ಞಾನದ ಅತ್ಯುನ್ನತ ಶಿಖರ

ಈಶೋಪನಿಷತ್ತಿನ ಆರು ಮತ್ತು ಏಳನೇ ಮಂತ್ರಗಳಲ್ಲಿ ಮಾನವನನ್ನು ಹೇಗೆ ಜ್ಞಾನದ ಅತ್ಯುನ್ನತ ಶಿಖರಕ್ಕೆ ಕೊಂಡೊಯ್ಯಬಹುದು ಎಂದು ತಿಳಿಸುತ್ತದೆ.

**ಯಸ್ತು ಸರ್ವಾಣಿ ಭೂತಾನಿ ಆತನ್ಯೇವಾನು ಪಶ್ಯತಿ**
**ಸರ್ವಭೂತೇಶು ಜಾತ್ಮಾನಂ ತತೋನ ವಿಜುಗುಪ್ಸತೇ**

ಎಲ್ಲಾ ಜೀವಿಗಳು ತನ್ನ ಆತ್ಮನಿಂದ ಬೇರೆಯಲ್ಲ. ತನ್ನ ಆತ್ಮವು ಇತರ ಜೀವಿಗಳ ಆತ್ಮಕ್ಕಿಂತ ಬೇರೆಯದಲ್ಲ ಎಂಬ ಆತ್ಮಜ್ಞಾನ ಉಂಟಾದಾಗ ಯಾರೂ ಬೇರೆಯಲ್ಲವೆಂಬ ಚಿಂತನೆ ಬೇರೂರಿದಾಗ, ಮಾನವನಲ್ಲಿ ಅರಿಷಡ್ವರ್ಗಗಳು ದೂರಾಗುತ್ತವೆ. ಸೃಷ್ಟಿಯಲ್ಲಿ ಏಕತೆಯನ್ನು ಕಂಡುಕೊಂಡಾಗ ತದಾತ್ಮ ಚಿಂತನೆಯು ಮೋಹ, ಶೋಕ, ಕೋಪ, ತಾಪಗಳನ್ನೆಲ್ಲ ತನ್ನ ಪರಿಧಿಯೊಳಗೆ ಬರಗೊಡಲಾರದು. ಮಾನವನಲ್ಲಿ ಈ ಚಿಂತನೆಯು ಸಾಕ್ಷಾತ್ಕಾರವಾಯಿತು ಎಂದರೆ ಆತ ಶ್ರೇಷ್ಠ ಮಾನವ ಅಥವಾ ಪುರುಷೋತ್ತಮ ಎಂದು ಎನಿಸಿಕೊಳ್ಳುತ್ತಾನೆ.

ಭಾರತದ ಹಲವಾರು ಸಾಧು ಸಂತರು, ಧೀಮಂತ ವ್ಯಕ್ತಿಗಳು, ಭಕ್ತ ಶ್ರೇಷ್ಠರು ಎಲ್ಲಾ ಜೀವಿಗಳೊಂದಿಗೆ ತಾನು ಒಂದೆಂಬ ಅನುಭವ ಪಡೆದು ತಮ್ಮ ಜೀವನ ಸಾರ್ಥಕ್ಯವನ್ನು ಪಡೆದು ಕೊಂಡಿದ್ದಾರೆ. ಇಂತಹ ಜೀವನ ಸಾರ್ಥಕ ಸ್ಥಿತಿಯಲ್ಲಿ ಇತರ ಜೀವಿಗಳ ಬಗ್ಗೆ ಮಮಕಾರ, ದಯಾಪರತೆ ಮೂಡುತ್ತದೆ. ಅಂತರಂಗದಲ್ಲಿ ಧನ್ಯತೆ, ಶಾಂತತೆ ಪ್ರಚೋದನೆಯಾಗುತ್ತದೆ. ಆಗ ಮಾನವ ಸಂತೃಪ್ತ, ಸಂತುಷ್ಟ ಹಾಗೂ ದೈವಿಕನಾಗುತ್ತಾನೆ.

**ಯಸ್ಮಿನ್ ಸರ್ವಾನಿ ಭೂತಾನಿ ಆತ್ಮೈವಾವಾಭೂತ್ ವಿಜನತಃ**
**ತತ್ರಕೋ ಮೋಹಃ ಕಃ ಶೋಕಃ ಏಕತ್ವಂ ಅನುಪಶ್ಯತಃ**

ಎಲ್ಲಾ ಭೂತಗಳು, ಜೀವಿಗಳೂ ತನ್ನ ಆತ್ಮವೇ ಎಂದುಕೊಂಡಾಗ, ಆತ ಪ್ರಜೆಯಾಗಿ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು, ಸಾಧಕನಾಗಿ ಅಂತರಂಗದಲ್ಲಿ ತಪಸ್ಸನ್ನು ಪ್ರಚೋದಿಸಿಕೊಂಡು ಸಮತ್ವವನ್ನು ಸಾಧಿಸುವ ಶಕ್ತಿಯನ್ನು ರೂಢಿಸಿಕೊಳ್ಳುವುದು ಸುಲಭವಾಗುತ್ತದೆ. ಈ ಸಮತ್ವ ಅಥವಾ ಏಕತೆಯನ್ನು ಕಂಡುಕೊಂಡವರಿಗೆ ಎಲ್ಲಿಯ ಮೋಹ? ಎಲ್ಲಿಯ ದುಃಖ?

ನಾವು ಮಿತಿಯನ್ನು ಮತ್ತು ಪರಿಧಿಯನ್ನು ಹಾಕಿಕೊಂಡಾಗಲೇ ನಾನು 'ನಾನೇ' ಎಂದುಕೊಳ್ಳುವಾಗಲೇ ದುಃಖ, ಮೋಹಗಳು ಪ್ರಾಪ್ತಿಯಾಗುವುದು. ಈ ಮಿತಿಗಳೇ ನಮ್ಮನ್ನು ಅಸಹಾಯಕರನ್ನಾಗಿಸುವುದು ಮತ್ತು ತುಲನಾತ್ಮಕ ಚಿಂತನೆಗೆ ದೂಡಿ ದುಃಖ ಉದ್ವೇಗಗಳನ್ನು ಉಂಟುಮಾಡುವುದು. ಏಕತೆಯ ಜ್ಞಾನವನ್ನು, ತತ್ವಶಾಸ್ತ್ರ ಸಾಧಿಸಿ ತೋರಿಸಿದಾಗ ಪ್ರತಿಯೊಬ್ಬ ಸ್ತ್ರೀ–ಪುರುಷರೊಂದಿಗೆ ಇಡೀ ಪ್ರಕೃತಿಯೊಂದಿಗೆ ನಮಗಿರುವ ನಿಜವಾದ ಆತ್ಮೀಯತೆ ನಮಗೆ ಗೋಚರವಾಗುತ್ತದೆ.

ಶ್ರೀರಾಮಕೃಷ್ಣ ಪರಮಹಂಸರು ಇವನ್ನೆಲ್ಲ ವಿಶ್ಲೇಷಿಸಿದ ನಂತರ ಜ್ಞಾನವು ಏಕತ್ವದ ಕಡೆಗೂ ಅಜ್ಞಾನವು ನಾನತ್ವದ ಕಡೆಗೂ ಒಯ್ಯುತ್ತದೆ ಎಂದು ಬೋಧಿಸುತ್ತಿದ್ದರು. 'ಏಕತೆ' ಯೆಡೆಗೆ ನಡೆಯುವಾತ, ತನ್ನ ಗಮ್ಯವನ್ನು ಸೇರುತ್ತಾನೆ. ಆದರೆ ನಾನತ್ವವನ್ನು ಪ್ರತಿಪಾದಿಸಲು ಹೊರಟಾಗ ಆತ ಪ್ರವಾಹದಿಂದ ಕಡಿದು ಹೋದ ನೀರಿನ ಧಾರೆಯಂತೆ ಹೊಂಡದಲ್ಲಿ ನಿಂತ ನೀರಾಗುತ್ತಾನೆ. ಸ್ವಚ್ಛವಾಗಿರುವುದಿಲ್ಲ, ಶುದ್ಧವಾಗಿರುವುದಿಲ್ಲ. ಕಲ್ಮಶ ಪೂರಿತನಾಗಿ ಅವನತಿ ಹೊಂದುತ್ತಾನೆ.

ಹಾಗಾಗಿ, ಸೃಷ್ಟಿಯಲ್ಲಿ ಏಕತೆಯನ್ನು ಕಾಣಲು ಸಾಧನೆಮಾಡಬೇಕು.

Nagaraj
M: 9845191648

Pratap
M : 9742142281

STANDARD PRINTERS

Multi Colour Offset Prints

No. 22, 6th Cross, Rangappa Road, Kamakya Layout,
BSK 3rd Stage, 5th Block, Bangalore - 560 085

# ಪ್ರಾಣಾನಾಂ ಗ್ರಂಥಿರಸಿ ರುದ್ರೋ ಮಾ ವಿಶಾಂತಕಃ ।
# ತೇನಾನ್ನೇನಾಪ್ಯಾಯಸ್ವ ॥

ಶ್ರೀರುದ್ರಂ ನಮಕಂನಲ್ಲಿ ಬರುವ ಈ ಮೇಲಿನ ಸಾಲಿನ ಅರ್ಥ / ವಿವರ ಈ ಕೆಳಗಿನಂತಿದೆ.

**'ಪ್ರಾಣಾನಾಂ ಗ್ರಂಥಿರಸಿ'** – ಅಂತಃಕರಣ ಸಂಸಾರದ ಬೇಗೆಯಿಂದ, ತಾಪತ್ರಯದಿಂದ, ಸಂಕಟದಿಂದ, ನೋವಿನಿಂದ ಗಂಟು ಗಂಟು ಗಂಟಾಗಿ ಇರುತ್ತದೆ. ಆದ್ದರಿಂದ **'ರುದ್ರೋ ಮಾ ವಿಶಾಂತಕಃ** – ಹೇ ರುದ್ರ ನನ್ನ ಒಳಗಡೆಗೆ ಹೋಗು. ರುದ್ರನನ್ನು ಒಳಗಡೆಗೆ ಹೋಗು ಅಂತ ಹೇಗೆ ಹೇಳುವುದು? ಅವನು ಒಳಗಡೆಯೇ ಇರುವವನು.

**ಶಿವಾನಂದ ಲಹರಿ ಸ್ತೋತ್ರ (35)**

**ಸರ್ವಜ್ಞಸ್ಯ ದಯಾ–ಕರಸ್ಯ ಭವತಃ ಕಿಂ ವೇದಿತವ್ಯಂ ಮಯಾ**
**ಶಂಭೋ ತ್ವಂ ಪರಮಾಂತರಂಗ ಇತಿ ಮೇ ಚಿತ್ತ ಸ್ಮರಾಮಿ–ಅನ್ವಹಮ್**

**ಸರ್ವಜ್ಞಸ್ಯ ದಯಾ–ಕರಸ್ಯ ಭವತಃ ಕಿಂ ವೇದಿತವ್ಯಂ ಮಯಾ** – ನೀನು ಸರ್ವಜ್ಞ, ದಯಾಕರ. ನನಗೆ ಅದು ಕೊಡು, ಇದು ಕೊಡು ಎಂದು ನಿನ್ನನ್ನು ನಾನು ಏನು ಕೇಳಿಕೊಳ್ಳುವುದು? ನಿನಗೆ ಎಲ್ಲವೂ ಗೊತ್ತು.

**ಶಂಭೋ ತ್ವಂ ಪರಮಾಂತರಂಗ ಇತಿ ಮೇ ಚಿತ್ತ ಸ್ಮರಾಮಿ–ಅನ್ವಹಮ್** – ಸಂಸಾರದ ಬೇರೆ ಬೇರೆ ವ್ಯವಹಾರಗಳಲ್ಲಿ ನೀನು ನನ್ನ ಒಳಗಡೆಯೇ ಇರುವವನು ಎಂಬುದನ್ನು ಮರೆತು ಬಿಡುತ್ತೇನೆ. ಹಾಗೇ ಮರೆತು ಬಿಡುವುದರಿಂದ ನನ್ನ ಸಾಂಸಾರಿಕವಾದ ಎಷ್ಟೋ ವ್ಯವಹಾರಗಳಲ್ಲಿ ಮೋಹ ಬಂದು ನುಸುಳಿಕೊಂಡು ಬಿಡುತ್ತದೆ. ಮೋಹ ಬಂದಾಗ ಕಣ್ಣಿನ ಮುಂದೆ ಒಂದು ಅಕ್ಷಿಪಟಲ ನಿರ್ಮಾಣವಾಗುತ್ತದೆ. ಯಾವುದು ಸರಿ, ಯಾವುದು ತಪ್ಪು ಎಂದು ಹೇಳುವ ಸಾರಾಸಾರ ವಿವೇಕಪ್ರಜ್ಞೆ ನಾಶವಾಗುತ್ತದೆ. **ಅದು ಆಗಬಾರದು ಅಂತ ಹೇಳಿ ನೀನು ಒಳಗಡೆ ಇದ್ದಿಯಾ ಎಂದು ಮತ್ತೆ ಮತ್ತೆ ಜ್ಞಾಪಕಕ್ಕೆ ತಂದುಕೊಳ್ಳುವುದಕ್ಕಾಗಿ 'ಮೇ ಚಿತ್ತ ಸ್ಮರಾಮಿ–ಅನ್ವಹಮ್'** ಪ್ರತಿಕ್ಷಣವೂ ನೀನು ನನ್ನಲ್ಲಿ ಇದ್ದಿಯಾ ಎಂದು ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುವುದಕ್ಕಾಗಿ ಇಂತಹ ಸ್ತೋತ್ರಗಳನ್ನು ಹೇಳಿಕೊಳ್ಳುತ್ತಾರೆ. ಮೋಹ ಜಾಸ್ತಿ ಆದರೆ ಸಂಸಾರ ಸ್ವಾರಸ್ಯವಿರುವುದಿಲ್ಲ. ಸಂಸಾರ ಸ್ವಾರಸ್ಯ ನಾಶ ಆಗಲಿಕ್ಕೆ ಕಾರಣವೇ ಮೋಹ.

<u>ಮಂಕುತಿಮ್ಮನ ಕಗ್ಗ ಡಿ. ವಿ. ಗುಂಡಪ್ಪ</u>

**ತರಿದುಬಿಡು, ತೊರೆದುಬಿಡು, ತೊಡೆದುಬಿಡು ನೆನಹಿಂದ ।**
**ಕರೆಕರೆಯ ಬೇರುಗಳ, ಮನದ ಗಂಟುಗಳ ।**
**ಉರಕೆ ಸೊಗಸೆನಿಸಿದಾ ಪ್ರೀತಿಹಾರಮುಮ್ಮೊರ್ಮೆ ।**
**ಉರುಳಪ್ಪುದಾತ್ಮಕ್ಕೆ – ಮಂಕುತಿಮ್ಮ ॥ 648 ॥**


With Best Compliments From

Dhoop Technologies Pvt Ltd

Power, Electrical, Electronics, Energy,IT,
and Interior Design experts

Dhoop

Contact: sales@dhooponline.com

Mobile:
+919880743953
+919972877121

#1664,27th main road HSR Layout sector -2 Bangalore

ಅಂತರಾತ್ಮಕ್ಕೆ ಮುಜುಗರ ಮಾಡುವಂತಹ ನೆನಪಿನ ಬೇರುಗಳನ್ನು ಮತ್ತು ಗಂಟುಗಳನ್ನು ಅಂತರಾಳದಿಂದ ಕತ್ತರಿಸಿಬಿಡು, ತೊರೆದುಬಿಡು, ಅಳಿಸಿಬಿಡು. ಏಕೆಂದರೆ ಹೃದಯಕ್ಕೆ ಹಿತವೆನಿಸುವಾ ಪ್ರೀತಿ ಪ್ರೇಮಗಳ ಮಾಲೆಯು ಆತ್ಮಕ್ಕೆ ಕೆಲವು ಬಾರಿ ನೇಣಿನಂತೆ ಆಗುವುದು ಎಂದು ಗತವನ್ನು ನೆನೆಯುವ, ಆ ನೆನಪಿನಲ್ಲಿ ಹಿಂಸೆಯನ್ನನುಭವಿಸುವ ನಮ್ಮ ಬದುಕಿನ ವಿಚಾರವನ್ನು ತಿಳಿಗೊಳಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

**ಉರಕೆ ಸೊಗಸೆನಿಸಿದಾ ಪ್ರೀತಿಹಾರಮುಮ್ಮೊರ್ಮೆ।**

ಮನಸ್ಸಿಗೆ ಬಹಳ ಅಪ್ಯಾಯಮಾನವಾದ ಮಕ್ಕಳ ಬಗ್ಗೆ, ಸಂಸಾರದಲ್ಲಿ ಎಷ್ಟೋ ವಿಚಾರಗಳನ್ನು ಹಂಚಿಕೊಳ್ಳುವಾಗ ಅದರ ಪರಿಣಾಮವನ್ನು ಯೋಚನೆ ಮಾಡದೆ ನಾವು ಆ ನಿಮಿಷಕ್ಕೆ ಸಿಗುವ ಮೋಹವೋ ಎಂದು ತಿಳಿಯದೆ ದುಡುಕಿ ಬಿಡುತ್ತೇವೆ. ಅದು ಮನಸ್ಸಿಗೆ ಆಹಾ ಎಂದು ಅನಿಸುತ್ತದೆ. ಆದರೆ ಪರಿಣಾಮದಲ್ಲಿ ಅದು ಉರುಳು, ಆತ್ಮಕ್ಕೇ ಉರುಳಾಗುತ್ತದೆ. ಆದ್ದರಿಂದ ಓ ಶಿವ, ರುದ್ರ ನೀನು ನನ್ನ ಒಳಗಡೆಯೇ ಸದಾ ಕಾಲ ಇರು.

**********

ನನ್ನ ಚಿತ್ತ ಕುದಿಯುತ್ತಿದೆ. ಅಂತಃಕರಣದ ಗಂಟುಗಳೆಲ್ಲ ವಿಪರೀತ ಬಿಸಿ ಮಾಡುತ್ತಿದೆ. ನೋಡು ನನ್ನ ಹೃದಯ ಬೇಯುತ್ತಿದೆ. ಸಂಕಟದಿಂದ ನೋವಿನಿಂದ ಕಷ್ಟಗಳಿಂದ ಬೇಯುತ್ತಿದೆ. ಯಾವು ಯಾವುದೋ ತಾಪತ್ರಯಗಳು ಯಾವು ಯಾವುದೋ ಸಂಕಟಗಳು. ಸರಿಯಾಗಿ ಸಂಸಾರದ ಸುಖವನ್ನು ಅನುಭವಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನೀನು ಇಲ್ಲಿ ಬಂದು ವಾಸ ಮಾಡು. ನೀನು ಇಲ್ಲಿ ಬಂದು ವಾಸ ಮಾಡಿದರೆ,

**ಭಿದ್ಯತೇ ಹೃದಯಗ್ರಂಥಿ ದ್ಯಂತೇ ಸರ್ವಸಂಶಯಾಃ ।**

**ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥8॥**

ಹೃದಯದ ಗ್ರಂಥಿಗಳೆಲ್ಲ ಕಳಚಿಕೊಳ್ಳುತ್ತದೆ. ಎಲ್ಲಾ ಸಂಶಯಗಳು ನಾಶವಾಗಿ ಹೋಗುತ್ತವೆ. ಎಲ್ಲಾ ಪಾಪಗಳು (ಕೆಟ್ಟ ಕೆಲಸಗಳು) ನಾಶವಾಗಿ ಹೋಗುತ್ತವೆ. ಯಾವಾಗ ಪರಾವರ ಇಲ್ಲಿ ಬಂದು ಕುಳಿತುಕೊಳ್ಳುತ್ತಾನೋ ಅಥವಾ ಪರಾವರನನ್ನು ಇಲ್ಲಿ ಇದ್ದಾನೆ ಎಂದು ತಿಳಿದುಕೊಳ್ಳುತ್ತಾರೋ, ಪರಾವರ ಇಲ್ಲಿ ಇದ್ದಾನೆ ಎಂಬುದನ್ನು ಅನುಭವಿಸುತ್ತೇವೋ ಆವಾಗ ಮೇಲಿನ ಮೂರು (ಗ್ರಂಥಿ, ಸಂಶಯ, ಪಾಪ) ಆಗುತ್ತದೆ. ಆದ್ದರಿಂದ ಇಲ್ಲಿ ಕೇಳಿಕೊಳ್ಳುವುದು,

**ಪ್ರಾಣಾನಾಂ ಗ್ರಂಥಿರಸಿ ರುದ್ರೋ ಮಾ ವಿಶಾಂತಕಃ।**

ನನ್ನ ಪ್ರಾಣ/ಜೀವ ಎಲ್ಲಾ ಗಂಟು ಗಂಟಾಗಿದೆ. ನೀನು ನನ್ನ ಒಳಗಡೆ ಬಂದು ಕುಳಿತುಕೋ

**ತೇನಾನ್ನೇನಾಪ್ಯಾಯಸ್ವ॥**

ನಿನ್ನ ಅನುಗ್ರಹವೆಂಬ ಅನ್ನವನ್ನು ನನಗೆ ಕರುಣಿಸಿ ನನ್ನನ್ನು ಸಂತೋಷದಲ್ಲಿ ಇಡು.

**– ವಿದ್ವಾನ್ ಶ್ರೀ ರಾಮಕೃಷ್ಣ ಭಟ್**

**(29–03–2025 ರಂದು SLN ವೇದ ಪಾಠಶಾಲೆಯಲ್ಲಿ ನಡೆದ ಗುರುಗಳ ಪ್ರವಚನದ ಧ್ವನಿಮುದ್ರಿಕೆಯಿಂದ ಪತ್ರಿಕೆಗೆ ಪರಿವರ್ತಿಸಲಾಗಿದೆ.)**

# ಕಡೇ ಕಾರ್ತಿಕ ಸೋಮವಾರದ ಪ್ರಯುಕ್ತ ಸಂಘದ ವತಿಯಿಂದ ಪ್ರದೋಷ ಪೂಜೆ, ಬಿಲ್ವಾರ್ಚನೆ ಹಾಗೂ ರುದ್ರಾಭಿಷೇಕ











## ಪ್ರದೋಷ ಪೂಜೆ



**ಪ್ರದೋಷ ದಿನದಂದು ಸಂಘದಲ್ಲಿ ರುದ್ರಾಭಿಷೇಕ ಸಂಜೆ 5.30 ರಿಂದ ಮಾಡಲಾಗುತ್ತದೆ.**

## ಸಂಘದ ಗಾಯತ್ರೀ ಭವನದಲ್ಲಿ ಜರುಗುತ್ತಿರುವ ಕಾರ್ಯಕ್ರಮಗಳು.

1. ಸನ್ಮಾನ್ಯ ಸದಸ್ಯರೇ, ಪ್ರತೀ ಶನಿವಾರ ಮತ್ತು ಭಾನುವಾರದಂದು ಬೆಳಿಗ್ಗೆ 6.15 ರಿಂದ 8.00 ಗಂಟೆಯವರೆಗೆ ವೇದ ಗುರುಗಳಿಂದ ಎರಡು ಗುಂಪುಗಳಲ್ಲಿ ವೇದ ತರಗತಿಗಳು ಜರುಗುತ್ತಿವೆ.
2. ಪ್ರತೀ ಸೋಮವಾರದಿಂದ ಶುಕ್ರವಾರದವರೆಗೆ ( 5 ದಿನಗಳು ) ಯೋಗ ಗುರುಗಳಾದ ಶ್ರೀಮತಿ ಪ್ರೇಮರೆಡ್ಡಿ ರವರಿಂದ ಸಂಜೆ 5 ರಿಂದ 6 ರ ವರೆಗೆ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ವತಿಯಿಂದ ಸಾರ್ವಜನಿಕವಾಗಿ, ಯೋಗದ ತರಗತಿ ಜರುಗುತ್ತಿವೆ.
3. ಪ್ರತೀ ತಿಂಗಳ ತ್ರಯೋದಶಿಯಂದು ಸಂಜೆ 5.30 ಕ್ಕೆ ಸಾರ್ವಜನಿಕವಾಗಿ ಪ್ರದೋಷ ಪೂಜೆಯು ಗಾಯತ್ರೀ ಭವನದಲ್ಲಿ ಜರುಗುತ್ತಿವೆ.

## ಯೋಗ ತರಗತಿಗಳು

ಯೋಗ ತರಗತಿಗಳನ್ನು **ಸೋಮವಾರ ಮತ್ತು ಗುರುವಾರ ದಂದು ಸಂಜೆ 6 ರಿಂದ 7** ರವರೆಗೆ ನಡೆಸಲಾಗುತ್ತದೆ. ಎಲ್ಲಾ ವಯಸ್ಕರಿಗೆ ತರಗತಿಗಳು ತೆರೆದಿರುತ್ತವೆ. ಈ ತರಗತಿಗಳು ಜೂನ್ 2022 ರಿಂದ ನಡೆಯುತ್ತಿವೆ.

ಈ ತರಗತಿಗಳಿಗೆ ಸೇರಲು ಆಸಕ್ತಿ ಇರುವವರು ಈ ಲಿಂಕ್‌ನೊಂದಿಗೆ ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳ ಬಹುದು. http://tiny.cc/Yoga-HSRBBS ಅಥವಾ ಸಂಘದ ಕಾರ್ಯದರ್ಶಿಗಳನ್ನು ಸಂಪರ್ಕಿಸಿ ಅಥವಾ ಸಂಘದ ಕಾರ್ಯಾಲಯಕ್ಕೆ ತರಗತಿ ನಡೆಯುವ ವೇಳೆಯಲ್ಲಿ ಖುದ್ದಾಗಿ ಬಂದು ಸೇರಿಕೊಳ್ಳಬಹುದು.

ಹೆಚ್‌ಎಸ್‌ಆರ್ ಬಡಾವಣೆ ಬ್ರಾಹ್ಮಣ ಸಂಘ
ಇರುವುದದು ಸದಾ ಬಡಾವಣೆ ಜನರ ಸಂಘ
ವೇದಪಾಠ ಶಾಲೆಯೂ ಇದರ ಒಂದು ಅಂಗ
ಯೋಗ ಭಜನೆ ಜಯಂತಿಗಳಿದರ ಪಂಗ
ಸಂಗೀತ ಸಾಂಸ್ಕೃತಿಕ ಕಾರ್ಯಕ್ರಮ ಗಳಿದಕೆ ಶೃಂಗ
ಅನಾಚಾರಗಳ ಮಾಡಲಿಚ್ಚಿಸುವುದಿದು ಭಂಗ
ಬನ್ನಿ ಎಲ್ಲರೂ ಮಾಡೋಣ ಒಂದು ಸತ್ಸಂಗ
ಜೊತೆ ಸೇರಿ ಎಲ್ಲರೂ ಸೇರೋಣ ಉತ್ತುಂಗ

– ಅ ರಾ ನ ಮೂರ್ತಿ

**ನಮ್ಮ ಸಂಘದಲ್ಲಿ ಮುಂಬರುವ ಕಾರ್ಯಕ್ರಮಗಳು**

| | |
|---|---|
| ಪ್ರದೋಷ | 01–01–2025 |
| | 16–01–2025 |
| | 30–01–2025 |
| | 14–02–2025 |
| | 01–03–2025 |
| | 16–03–2025 |
| | 30–03–2025 |
| ರಥಸಪ್ತಮಿ | 25–01–2025 |
| ಮಧ್ವನವಮಿ | 27–01–2025 |
| ಮಹಾಶಿವರಾತ್ರಿ | 15–02–2025 |
| ಶ್ರೀರಾಮನವಮಿ | 27–03–2025 |

ಗಾಯತ್ರಿ ಭವನವನ್ನು
ಶುಭ ಸಮಾರಂಭಗಳಿಗೆ
ವಿಪ್ರ ಸದಸ್ಯ ಬಂಧುಗಳಿಗೆ
ನಿಗದಿತ ಮೊಬಲಗು
ಪಾವತಿಯೊಂದಿಗೆ
ಸ್ಥಳಾವಕಾಶ
ಕಲ್ಪಿಸಲಾಗುವುದು.
ವಿವರಗಳಿಗೆ
ಕಾರ್ಯದರ್ಶಿಯವರನ್ನು
ಸಂಪರ್ಕಿಸಿ


MAGNA
Centres for Obesity Diabetes and Endocrinology
Yearly Subscription Packages
SWASTHYAVURIHI
Low GI rice For Diabetes
Obesity
Thyroid
Growth Disorder
Diabetes
PCOS
14TH
Years of Excellence
NABL Accredited Lab
Pituitary Disease
Sexual Problems
Dietician
Osteoporosis
Thyroid
Diabetes
Growth Disorder & Osteoporosis
Obesity
PCOS & Sexual Problems
Dr. Anantharaman R
MBBS, MD, DM(Endo)
For Appointments: 9945953953 / 9739412608
#703, Sai Manasa Building, 1st floor, 30th Main Rd, BTM 2nd Stage, Kuvempu Nagar Bus Depot, Bengaluru - 560076
Scan the QR Code to visit our Website


RADIANT SYSTEMS
Radiant Systems
YASKAWA
QUALITY PRODUCTS, TIMELY SERVICE
RADIANT SYSTEMS, Authorized Business Partner of YASKAWA India Pvt Ltd for Karnataka region. We deal mainly with products related to Automation and Process Industries.
1) AC Drives, Servo Motor/Drives & Robotics.
2) Panel Engineering Solutions.
3) YASKAWA Solar Pump Controller with Built In MPPT.
4) Retrofit of Existing panels & PCC/MCC Panels.
YASKAWA TOTAL SYSTEM SOLUTIONS
MASTER OF ROBOTICS, MOTION AND CONTROL
#695, 15th Cross, JP Nagar, 2nd Phase, Bangalore-560078
Mobile: +91 7760277175 Email: radiantspl@gmail.com


SME
DISTRIBUTION TRANSFORMERS
RANGE: 15 KVA - 1000 KVA
SERVICES: MANUFACTURING, REPAIR & RECONDITIONING
TYPE: CONVENTIONAL AND STAR RATED
#237, KIADB Industrial Area Phase 2, Vasanthanarasapura, Tumkur - 572128
sme_mathikere@yahoo.com



support@qualityindustries.com
QUALITY INDUSTRIES
Manufacturing excellence in DPC aluminum wires, strips, and transformer reconditioning (25–500 KVA)

# ಗೀತಾ ಜಯಂತಿ






KALYAN
JEWELLERS
HSR LAYOUT - No-2330, 17th Cross, 24th Main, Sector 1, Bangalore. Ph: 9900573633
FOR MORE DETAILS CONTACT US ON TOLL FREE NUMBER: 1800 425 7333 | WWW.KALYANJEWELLERS.NET | FOLLOW US ON | BUY ONLINE @ WWW.CANDERE.COM


Pure Since 1925
ಭೀಮ
BHIMA
ಬೆಂಗಳೂರು : ಡಿಕನ್ಸನ್ ರಸ್ತೆ • ಜಯನಗರ 3ನೇ ಬ್ಲಾಕ್ • ಕೋರಮಂಗಲ • ಹೆಚ್.ಬಿ.ಆರ್ ಲೇಔಟ್ • ರಾಜಾಜಿನಗರ • ಮಾರತಹಳ್ಳಿ
ಹೂಡಿ • ಮಲ್ಲೇಶ್ವರಂ • ಜಯನಗರ 4ನೇ ಬ್ಲಾಕ್ • ಕಮರ್ಷಿಯಲ್ ಸ್ಟ್ರೀಟ್ • ಆರ್ ಆರ್ ನಗರ
ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ • ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ
Also available at
bhimagold.com
BHIMA Helpline
1800-121-9076
(10:00 a.m. to 7:00 p.m.)